# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 93 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 19–10–2023 ಗುರುವಾರ | ಪುಟ: 4 | ಬೆಲೆ : ರೂ.2–00
Volume - 01 Issue - 93 | Title- Code: KARKAN 28269 | Chitradurga | Date: 19-10-2023 Thursday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಮೃತ ಸಾಗರ್ ಕುಟುಂಬಕ್ಕೆ ಸದ್ಗುರು ಆಯುರ್ವೇದ ಸಂಸ್ಥೆ ನೆರವು 2

ಬೆಂಗಳೂರು ವಿಭಾಗ ಮಟ್ಟ, ರಾಜ್ಯ ಮಟ್ಟದ ಯೋಗಾಸನಾ ಸ್ಪರ್ಧೆಗೆ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಚಾಲನೆ 3

ಗೌರಸಮುದ್ರ ಶ್ರೀಮಾರಮ್ಮ ದೇವಿ ಹುಂಡಿಹಣ ಎಣಿಕೆ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಅಂತರ್ ಜಿಲ್ಲಾ ಸಮ್ಮೇಳನದ ಸ್ಮರಣ ಸಂಚಿಕೆಗೆ ಹೆಸರು, ಲಾಂಛನ ಸೂಚಿಸಲು ಸಾಹಿತ್ಯಾಸಕ್ತರಿಂದ ಆಹ್ವಾನ

» **ಹೊಸದುರ್ಗ**

ತಾಲೂಕಿನ ಸಾಣೇಹಳ್ಳಿಯಲ್ಲಿ ಡಾ:ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 30 ಹಾಗೂ 31 ರಂದು ಎರಡು ದಿನಗಳ ಕಾಲ ನಡೆಯಲಿರುವ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಅಂತರ್ ಜಿಲ್ಲಾ ಸಮ್ಮೇಳನದ ಸವಿನೆನಪಿಗೆ ಸ್ಮರಣ ಸಂಚಿಕೆಯನ್ನು ಹೊರತರಲು ಸ್ವಾಗತ ಸಮಿತಿ ತೀರ್ಮಾನಿಸಿದ್ದು ಈ ಸ್ಮರಣ ಸಂಚಿಕೆಗೆ ಶೀರ್ಷಿಕೆಯನ್ನು (ಹೆಸರು) ಹಾಗೂ ಸಮ್ಮೇಳನದ ಲಾಂಛನವನ್ನು ಆಹ್ವಾನಿಸಲಾಗಿದ್ದು ಎರಡೂ ಜಿಲ್ಲೆಯ ಸಾಹಿತಿಗಳು ಬುದ್ದಿಜೀವಿಗಳು ಆಸಕ್ತ ಕಲಾಭಿಮಾನಿಗಳು ಸಾಹಿತ್ಯಾಭಿಮಾನಿಗಳು ನವಂಬರ್ 28 ರೊಳಗಾಗಿ ಕೆ.ಎಂ.ಶಿವಸ್ವಾಮಿ, ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಚಿತ್ರದುರ್ಗ ಮೋ:8310540731 ಹಾಗೂ ಸೂರಿಶ್ರೀನಿವಾಸ್ ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಚಿಕ್ಕಮಗಳೂರು ಮೋ:9449315663 ಇಲ್ಲಿಗೆ ವಾಟ್ಸಪ್ ನಂಬರ್‌ಗೆ ಕಳುಹಿಸಿ ಜೋತೆಗೆ ತಮ್ಮ ಹೆಸರು ಹಾಗು ವಿವರ ಕೊಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದ್ದು ಉತ್ತಮ ಶೀರ್ಷಿಕೆ ಕೊಟ್ಟು ಆಯ್ಕೆಯಾದ ಒಬ್ಬರಿಗೆ ಸಮ್ಮೇಳನದಲ್ಲಿ ಸನ್ಮಾನಿಸಿ ಪುರಸ್ಕರಿಸಲಾಗುವುದು ಎಂದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಆಹಾರ ಸುರಕ್ಷತೆ, ಗುಣಮಟ್ಟ ಇಲಾಖೆಯಿಂದ ಸ್ವಚ್ಛತೆಯ ಮಾಪನ




» **ಚಿತ್ರದುರ್ಗ**

ಚಿತ್ರದುರ್ಗ ನಗರದ ವಿವಿಧ ಹೋಟೆಲ್, ಬೇಕರಿಗಳಿಗೆ ಆಹಾರ ಸುರಕ್ಷತೆ & ಗುಣಮಟ್ಟ ಇಲಾಖೆಯ ವತಿಯಿಂದ ಮಂಗಳವಾರ ಭೇಟಿ ನೀಡಿ ಸ್ವಚ್ಛತೆಯ ಮಾಪನ ನಡೆಸಲಾಯಿತು. ಬೆಂಗಳೂರಿನಿಂದ ಆಗಮಿಸಿದ ಅಪರ್ಣಭಟ್ ಅವರು ಪಡೆದಿರುವ ಕೆಲವು ಆಯ್ದ ಹೋಟೆಲ್‌ಗಳು ಮತ್ತು ಬೇಕರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಈ ಸಂದರ್ಭದಲ್ಲಿ ಅಂಕಿತಾಧಿಕಾರಿ ಡಾ.ಸಿ.ಎಲ್.ಪಾಲಾಕ್ಷ, ಆಹಾರ ಸುರಕ್ಷತಾಧಿಕಾರಿಗಳಾದ ತಿರುಮಲೇಶ್, ನಂದಿನಿ ಕಡಿ ಹಾಗೂ ಮಂಜುನಾಥ್ ಇದ್ದರು.

# ನೆಲೆ ಇಲ್ಲದ ವಲಸೆ ಕಾರ್ಮಿಕರ ಬದುಕು

» **ವಿಶೇಷ ವರದಿ: ಜಿ.ಶಾಂತ**

ಮಗನ ಪರೀಕ್ಷೆ ಮುಗಿದಿದ್ದರಿಂದ ಚನ್ನಗಿರಿ ತಾಲ್ಲೂಕಿನ ಮಾವಿನಕಟ್ಟೆ ಅಕ್ಕನ ಮನೆಗೆ ಕಳೆದವಾರ ಹೋಗಿದ್ದೆ. ಅಕ್ಕ ಒಂದು ಚಿಕ್ಕ ಅಂಗಡಿ ನಡೆಸುತ್ತಾಳೆ. ಹೀಗೆ ಅಕ್ಕನ ಜೊತೆ ಹರಟುತ್ತಾ ಕುಳಿತಿದ್ದಾಗ ಹುಡುಗನೊಬ್ಬ ಲಗುಬಗೆಯಿಂದ ತಿನಿಸೊಂದನ್ನು ಖರೀದಿಸಿ, ಬಂದ ದಾರಿ ಹಿಡಿದ. ವಾಪಸು ಹೆಜ್ಜೆ ಹಾಕಿದ ಹುಡುಗನತ್ತ ನೋಡಿದ ನನ್ನಕ್ಕ 'ಈ ಹುಡುಗ್ರು ಅವ್ರತ್ತಿಗೇನ ತುಂಬಾ ಕಾಳಜಿ ಮಾಡ್ತರೆ' ಅಂತ ಹೇಳಿದ್ಲು. ಅಕ್ಕನ ಮಾತಲ್ಲೂ ಒಂದು ಅಕ್ಕರೆ ಇತ್ತು. ನಾನು 'ಏನಾಗಿದೆ? ಅವ್ರ ಅತ್ತಿಗೆಗೆ?' ಎಂದು ಕೇಳಿದೆ.

'ಅವ್ರು ಒಂದಷ್ಟು ಜನ ಬೇರೆ ಕಡೆಯಿಂದ ಪ್ಲಾಂಟೇಶನ್ ಕೆಲ್ಸಕ್ಕೆ ಬಂದಿದಾರೆ. ಎಲ್ರೂ ಅಲ್ಲೇ ಇದಾರೆ. ಅಲ್ಲಿ ಅವ್ರ ಅತ್ತಿಗೆಗೆ ಐದಾರು ದಿನದ ಹಿಂದೆ ಹೆರಿಗೆ ಆಗಿದೆ. ಹೆಣ್ಣು ಮಗು ಆಗಿದೆ' ಅಂದ್ಲು.

'ಈ ವಾತಾವರಣದಲ್ಲಿ ಪ್ಲಾಂಟೇಶನ್ ನಲ್ಲಿ ಹೆಂಗಿರ್ತಾರೆ? ನಾಳೆ ಹೋಗಿ ನೋಡ್ಕೊಂಡು ಬರೋಣ' ಅಂತ ಹೇಳಿದೆ.


ಮರು ದಿನ ಅಕ್ಕನಿಗೆ ಕೆಲಸ ಇದ್ದ ಕಾರಣ ನಮ್ಮ ಹುಡುಗ ಸಚಿನ್ನನ್ನು ಕರೆದುಕೊಂಡು ಪ್ಲಾಂಟೇಶನ್ ಕಡೆ ಹೊರಟೆ. ಜತೆಗೆ ಕ್ಯಾಂಪಿನ ಹುಡುಗನೂ ಇದ್ದ. ಬೈಕ್ ಮುಂದೆ ಚಲಿಸುತ್ತಿತ್ತು. ಎಲ್ಲ ಅನುಕೂಲ ಇರುವ ಕಡೆ ಹಸಿ ಬಾಣಂತನದ ದಿನಗಳನ್ನು ಕಳೆಯೋದು ಕಷ್ಟ. ಅಂತಾದ್ರಲ್ಲಿ ಪ್ಲಾಂಟೇಶನ್ನಲ್ಲಿ ಅದೂ ನಾಲ್ಕೈದು ದಿನದ ಹಸುಗೂಸಿನ ಜೊತೆ ಹೆಂಗೆ ಇರೋಕೆ ಸಾಧ್ಯ? ಅನ್ನೋ ಆಲೋಚನೆ ನನ್ನನ್ನು ಕೊರೆಯುತ್ತಲೇ ಇತ್ತು.

ತುಂಬಾ ದೂರವೇನೂ ಇರಲಿಲ್ಲ. ಎರಡು, ಮೂರು ಕಿಮೀ ಚಲಿಸಿರಬಹುದು. ಸ್ವಲ್ಪ ದೂರದಲ್ಲಿ ಅಲ್ಲಲ್ಲಿ ವಾಸ ಮಾಡಲಿಕ್ಕೆಂದು ಹಾಕಿದ್ದ ಟೆಂಟ್ಗಳು, ಮುಂಭಾಗದಲ್ಲಿ ಆಟವಾಡುತ್ತಿದ್ದ ಮಕ್ಕಳು ಕಂಡರು. ಮಕ್ಕಳ ಕ್ಷೀಣಿಸಿರುವ ದೇಹಗಳು ಅವರು ಅಪೌಷ್ಟಿಕತೆ ಯಿಂದ ಬಳಲುತ್ತಿದ್ದಾರೆಂಬುದನ್ನು ಹೇಳುತ್ತಿದ್ದವು. ಮಕ್ಕಳನ್ನು ಮಾತನಾಡಿಸಿದೆ. ತುಸು ನಾಚಿಕೆ, ಕುತೂಹಲದಿಂದ ನೋಡಿ ನಕ್ಕರು.


ನಮ್ಮ ಜೊತೆಯಲ್ಲಿದ್ದ ಹುಡುಗ ಪುಟ್ಟ ಟೆಂಟ್ಗೆ ನನ್ನನ್ನು ಕರೆದು ಬಾಣಂತಿಯನ್ನು ತೋರಿಸಿ'ಇವರೇ ನಮ್ಮತ್ತಿಗೆ' ಎಂದು ಹೇಳಿದ. ಕೆಳಗೆ ಹಾಸಿಗೆಯಿಲ್ಲ. ಒಂದು ಹರಕಲು ಚಾಪೆ. ಹೊದೆಯಲು ಬಟ್ಟೆ. ನೆಲ ಹಾಸು ಕೂಡಾ ತಗ್ಗುದಿಣ್ಣೆಗಳಿಂದ ಕೂಡಿತ್ತು. ಇಂತಹ ಪರಿಸ್ಥಿತಿಯಲ್ಲಿ ಈ ಹೆಣ್ಣು ಮಗಳು ಹೇಗಿದ್ದಾಳೆ? ಎಂದು ನೆನೆದು ತುಂಬಾ ಸಂಕಟವಾಯಿತು.

ಆ ಬಾಣಂತಿ ಹೆಣ್ಣು ಮಗಳು









ನಿ□□ಭಾವುಕಳಾಗಿ ನನ್ನತ್ತ ನೋಡುತ್ತಿದ್ದರು. ನಾನೇ ಮೌನ ಮುರಿದು ಪರಿಚಯಿಸಿಕೊಂಡೆ. ಆಕೆಯ ಹೆಸರು ಮೀನಾಕ್ಷಿ ಅಂತ ಹೇಳಿದ್ರು. ಅವರ ಕಿರಿಯ ಮೈದುನ ಅಂಗಡಿಗೆ ಬಂದಾಗ ವಿಷಯ ತಿಳಿಸಿದ್ದರಿಂದ ನೋಡಲು ಬಂದೆವು ಎಂಬುದನ್ನು ತಿಳಿಸಿದೆ. ಮೀನಾಕ್ಷಿ ಅವರ ಪರಿಸ್ಥಿತಿ ವಿವರಿಸುತ್ತಾ ಹೋದರು.

'ನಮ್ಮ ಹೆರಿಗೆ ಹಿಂಗೆ ಆಗುತ್ತವೆ. ಎಲ್ಲಾದರೂ ಸಮಸ್ಯೆ ಅಂತ ಇದ್ದಾಗ ಆಸ್ಪತ್ರೆಗೆ ಹೋಗ್ತೇವಿ. ಮೊನ್ನೆ ಹೆರಿಗೆ ಏನೂ ಸಮಸ್ಯೆ ಆಗ್ಲಿಲ್ಲ. ಬೆಳಗಿನ ಜಾವ ಮೂರು ಗಂಟೆಗೆ ನೋವು ಶುರುವಾಗಿ, ಐದು ಗಂಟೆ ಸುಮಾರಿಗೆ ಹೆರಿಗೆ ಆರಾಮವಾಗಿ ಆಯ್ತು. ಇದು ಮೂರನೇ ಮಗು' ಅಂತ ಹೇಳಿದ್ರು.'ಮಗು ಮೂರು ತಿಂಗಳು ಆದ ಮೇಲೆ ಮರ ಕೆತ್ತಲು ಹೋಗುತ್ತೇನೆ. ಮಗು ಹಾಲು ಕುಡಿತಿದ್ರು ಪರವಾಗಿಲ್ಲ. ಹುಡುಗಿ ನಗಬೇಕು ಅಷ್ಟೇ. ಮಗು ನಗೋಕೆ ಶುರು ಮಾಡಿದ್ರೆ ಆಡಿಕೊಳ್ಳುತ್ತೆ ಅನ್ನೋ ಧೈರ್ಯ ನಮಿಗೆ. ನಾವು ಬೆಳಗ್ಗೆ ಆರು ಗಂಟೆಗೆ ಕೆಲಸಕ್ಕೆ ಹೋದ್ರೆ, ಸಂಜೆ ಐದಾರು ಗಂಟೆ ಆಗುತ್ತೆ. ಮಕ್ಳು ಯಾರೂ ಸ್ಕೂಲಿಗೆ ಹೋಗಲ್ಲ. ಇಲ್ಲೊಂದ್ ತಿಂಗ್ಳು, ಅಲ್ಲೊಂದ್ ತಿಂಗ್ಳು ಇದ್ರೆ ಸ್ಕೂಲಿಗೆ ಎಂಗೆ ಕಳಿಸೋದು? ಇಲ್ಲಿ ಪ್ರಾಣಿಗಳ ಭಯ ಮಕ್ಕಳಿಗಿರಲ್ಲ. ಎಲ್ಲ ಸೇರಿ ಓಡಿಸ್ತರೆ' ಎನ್ನುತ್ತ ಗುಡಿಸಲಿನ ಪಕ್ಕದಲ್ಲಿ ಮರಕ್ಕೆ ಕಟ್ಟಿದ ಸೀರೆಯ ಜೋಲಿಯಲ್ಲಿ ಮಗುವನ್ನು ಹಾಕಿ ತೂಗಲು ಶುರು ಮಾಡಿದರು.

'ಆಧಾರ್ ಕಾರ್ಡ್ ಇದೆ. ಸ್ವಂತ ಮನೆ ಇಲ್ಲ. ಜಮೀನು ಇಲ್ಲ. ನಮ್ಮ ಸಾಹ್ಕಾರ್ರು'ಆ'ರ್ ಮಾಡಿಸಿಕೊಟ್ಟಿದ್ದಾರೆ. ಕಾಡಲ್ಲೇ ಕೆಲಸಾ ಮಾಡೋದು, ಕಾಡಲ್ಲೇ ಟೆಂಟ್ ಹಾಕ್ಕಂಡು ಇ□□ತೀವಿ. ಚಳಿ, ಮಳೇ ಏನ್ಬಂದ್ರೂ ಈ ಟೆಂಟಲ್ಲೇ ಇ□□ತೀವಿ. ಸದ್ಯಕ್ಕೆ ಇಲ್ಲಿ ಮೂವತ್ತು ಜನ ಇದೀವಿ. ಇನ್ನೂ ಕೆಲವ್ರು ಬೇರೆ ಬೇರೆ ಊರಲ್ಲಿ ಕೆಲ್ಸಾ ಮಾಡ್ತಾರೆ. ಒಂದು ಕಡೆ ಪ್ಲಾಂಟೇಶನ್ ಕಟಾವು ಮುಗಿತ್ಲು ಇನ್ನೊಂದ್ಕಡೆ ಕಟಾವಿಗೆ ವೋಗ್ತೀವಿ...' ಎಂದು ಮಾತಿಗೆ ವಿರಾಮ ನೀಡಿದರು.

ನನಗೆ ಹೆಚ್ಚು ಮಾತನಾಡಿಸಲು ಯೋಚಿಸುವಂತಾಯಿತು. ಕೂಲಿ ಕಾರ್ಮಿಕರಿಗೆ ಸರಕಾರ ಎಲ್ಲ ಸೌಲಭ್ಯ ಪುಗ್ಸಟ್ಟೆ ಕೊಡುತ್ತೆ. ಅಕ್ಕಿ, ಬೇಳೆ, ಉಚಿತ ವಿದ್ಯುತ್, ಬಸ್ ಪ್ರಯಾಣ, ಮನೆಯೊಡತಿ ಖರ್ಚಿಗೆ ಹಣ ಎಲ್ಲ ಕೊಟ್ಟ ಮೇಲೆ ಕೂಲಿ ಮಾಡೋಕೆ ಜನ ಎಲ್ಲಿ ಸಿಕ್ತಾರೆ? ಎಂದು ಪ್ರಶ್ನಿಸುವವರು, ಆಡಿಕೊಳ್ಳುವವರು ಎಲ್ಲೆಡೆ ಸಿಗುತ್ತಾರೆ. ಅಷ್ಟೆಲ್ಲ ಉಚಿತಗಳು ಇದ್ದ ಮೇಲೂ ಈ ವಲಸೆ ಕಾರ್ಮಿಕರು ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ? ವರ್ಷಗಟ್ಟಲೆ ದುಡಿದರೂ ನಿಲ್ಲಲು ನೆಲೆ ಇಲ್ಲದೇ, ವಾಸಿಸಲು ಸೂರಿಲ್ಲದೇ ಬದುಕುವ ಸ್ಥಿತಿ ಏಕೆ ಬಂತು? ಕೊರೊನಾ ಸಂದರ್ಭದಲ್ಲಿ ಇಂತಹ ವಲಸೆ ಕಾರ್ಮಿಕರ ಸ್ಥಿತಿಗತಿ ಕುರಿತು ಒಂದಷ್ಟು ಚರ್ಚೆಗಳು ನಡೆದವು. ಈಗ ವಲಸೆ ಕಾರ್ಮಿಕರ ಸ್ಥಿತಿಗತಿ ಕುರಿತು ಕೇಳುವವರೇ ಇಲ್ಲದಂತಾಗಿದೆ. ಅವರ ಬದುಕಿಗೂ ಯಾವ ಗ್ಯಾರಂಟಿಯ ಖಾತ್ರಿಯೂ ಇಲ್ಲವಾಗಿದೆ. ಸರ್ಕಾರ ಇಂತವರ ಬದುಕಿಗೆ ಒಂದು ಶಾಶ್ವತವಾದ ಪರಿಹಾರ ಒದಗಿಸಿದರೇ ನಿಜವಾಗಲು ಬಡವರ ಅಭಿವೃದ್ಧಿ ಆದಂತೆ.






## ಪ್ರಮುಖ ಸುದ್ದಿ

# ನೀರಾವರಿ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ಕಾಲ ನಿರಂತರ ವಿದ್ಯುತ್ ನೀಡುವಂತೆ ಒತ್ತಾಯಿಸಿ ರೈತ ಸಂಘ ಪ್ರತಿಭಟನೆ

» **ಚಿತ್ರದುರ್ಗ**

ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ನಿರಂತರವಾಗಿ ಏಳು ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿ ಬೆಸ್ಕಾಂ ವಿರುದ್ದ ಧಿಕ್ಕಾರಗಳನ್ನು ಕೂಗಲಾಯಿತು.

ಪ್ರವಾಸಿ ಮಂದಿರದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಹೊರಟ ಮೆರವಣಿಗೆಯಲ್ಲಿ ಕೆಲವು ರೈತರು ತಲೆ ಮೇಲೆ ರೊಟ್ಟಿ ಬುತ್ತಿ ಹೊತ್ತುಕೊಂಡು ನಮಗೆ ಏಳು ಗಂಟೆಗಳ ಕರೆಂಟ್ ಕೊಡಿ ಸರ್ಕಾರಕ್ಕೆ ರೊಟ್ಟಿ ಬುತ್ತಿ ಕೊಡುತ್ತೇವೆಂದು ಚೇಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಬೇಡರೆಡ್ಡಿಹಳ್ಳಿ ಬಸವರೆಡ್ಡಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡುತ್ತ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನಕ್ಕೆ ಏಳು ಗಂಟೆಗಳ ಕಾಲ ನಿರಂತರ ವಿದ್ಯುತ್ ನೀಡುವುದಾಗಿ ಭರವಸೆ ಕೊಟ್ಟಿದ್ದ ಸರ್ಕಾರ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ವಿದ್ಯುತ್‌ನ್ನು ನಿಲುಗಡೆಗೊಳಿಸುತ್ತಿರುವುದರಿಂದ ಕೃಷಿಗಾಗಿ ಸಾಲ ಮಾಡಿ ಬಂಡವಾಳ ಹಾಕಿರುವ ರೈತ



ವಿಷ ಕುಡಿಯುವ ಹಂತಕ್ಕೆ ತಲುಪಿದ್ದಾನೆ. ಹಾಸನ ಜಿಲ್ಲೆಯಲ್ಲಿ ದಿನಕ್ಕೆ ಒಂಬತ್ತು ಗಂಟೆಗಳ ಕಾಲ ರೈತರಿಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಅಲ್ಲಿ ಹೇಗೆ ಸಾಧ್ಯ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು? ವಿಧಾನಸಭೆ ಚುನಾವಣಾ ಪೂರ್ವದಲ್ಲಿಯೇ ರಾಜ್ಯದ ಜನತೆಗೆ ಕಾಂಗ್ರೆಸ್ ಪಕ್ಷ ಘೋಷಿಸಿದ ಐದು ಗ್ಯಾರೆಂಟಿಗಳಿಗೆ ಹಣ ಒದಗಿಸಲು ಆಗುತ್ತಿಲ್ಲ. ಖಜಾನೆ ದಿವಾಳಿಯಾಗಿದೆ. ರೈತರಿಗೆ ನೀಡಿರುವ ಸಬ್ಸಿಡಿ ಚೆಕ್‌ಗಳು ವಾಪಸ್ ಹೋಗುತ್ತಿವೆ. ಸಂಜೆ ಆರರಿಂದ ಹತ್ತು ಗಂಟೆಯವರೆಗೆ ವಿದ್ಯುತ್ ತೆಗೆಯುತ್ತಿದ್ದಾರೆ. ಸಾವಿರಾರು ಕುಟುಂಬಗಳು ಬೆಳೆಯನ್ನು ರಕ್ಷಿಸಿಕೊಳ್ಳಲು ಹೊಲಗಳಲ್ಲಿಯೇ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ.


ಪುಟ 2

## ಫಾಸ್ಟ್ ನ್ಯೂಸ್

### ಪೆತ್ತಮ್ಮರಹಟ್ಟಿ: ಅಗ್ನಿ ಆಕಸ್ಮಿಕ ಸಂಪೂರ್ಣವಾಗಿ ಸುಟ್ಟುಹೋದ ಗುಡಿಸಲು



» ಚಳ್ಳಕೆರೆ

ತಾಲ್ಲೂಕಿನ ನನ್ನಿವಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆತ್ತಮ್ಮರಹಟ್ಟಿಯಲ್ಲಿ ಚಿನ್ನಮ್ಮ ಕೋ ದುರ್ಗದಪಾಪಯ್ಯ ಎಂಬುವವರಿಗೆ ಸೇರಿದ ಗುಡಿಸಲಿಗೆ ಆಕಸ್ಮಿಕ ಬೆಂಕಿ ಬಿದ್ದ ಪರಿಣಾಮವಾಗಿ ಗುಡಿಸಲು ಪೂರ್ಣಪ್ರಮಾಣದಲ್ಲಿ ಸುಟ್ಟುಹೋಗಿದೆ. ಎಂದಿನಂತೆ ಮನೆಯಲ್ಲಿ ಮಧ್ಯಾಹ್ನ ವೇಳೆಯಲ್ಲಿ ಕೆಲಸದಲ್ಲಿ ತೊಡಗಿದ್ದಾಗ ದಿಢೀರ್ ಕಾಣಿಸಿಕೊಂಡ ಬೆಂಕಿ ಕೆಲವೇ ನಿಮಿಷಗಳಲ್ಲಿ ಇಡೀ ಮನೆಯಲ್ಲಿ ವ್ಯಾಪಿಸಿದೆ. ಕೂಡಲೇ ನೆರೆಹೊರೆಯವರು ದಾವಿಸಿ ಬಂದು ಮನೆಯಲ್ಲಿದ್ದ ವಸ್ತುಗಳನ್ನು ಹೊರಹಾಕುವ ಮುನ್ನವೆ ಬೆಂಕಿ ಇಡೀ ಗುಡಿಸಲನ್ನು ವ್ಯಾಪಿಸಿದ್ದು, ಗುಡಿಸಿನಲ್ಲಿದ್ದ ಆಹಾರ ಪದಾರ್ಥ, ಬಟ್ಟೆ, ದಾಖಲೆ ಹಾಗೂ ಇನ್ನಿತರ ವಸ್ತುಗಳು ಬೆಂಕಿಯಲ್ಲಿ ಸುಟ್ಟು ಹೋಗಿವೆ. ಮನೆ ಕಳೆದುಕೊಂಡ ಕುಟುಂಬ ಅಸಹಾಯಕರಾಗಿ ಮನೆಯ ಮುಂದಿನ ಬೀದಿಯಲ್ಲಿ ನಿಂತ ದೃಶ್ಯ ಸಾರ್ವಜನಿಕರ ಮನಕಲಕುವಂತಿತ್ತು. ಚಳ್ಳಕೆರೆ ಪೊಲೀಸರು ಅಗ್ನಿ ಆಕಸ್ಮಿಕ ಪ್ರಕರಣದ ವಿಚಾರಣೆ ನಡೆಸಿದ್ದಾರೆ.

### ಪಂಪ್‌ಸೆಟ್‌ಗೆ 7 ಗಂಟೆ ಕಾಲ ನಿರಂತರ ವಿದ್ಯುತ್ ನೀಡುವಂತೆ ಒತ್ತಾಯಿಸಿ ರೈತ ಸಂಘ ಪ್ರತಿಭಟನೆ

» ಮೊದಲ ಪುಟದಿಂದ

ಅಂತಹವ ಪಾಡೇನು? ಎನ್ನುವ ಜ್ಞಾನವೂ ಸರ್ಕಾರಕ್ಕಿಲ್ಲದಂತಾಗಿರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. ಕ್ರಿಕೆಟ್ ಮೇಲಿರುವ ವ್ಯಾಮೋಹ ರೈತರ ಮೇಲೆ ಇಲ್ಲದಂತಾಗಿದೆ. ಕರೆಂಟ್ ತೆಗೆಯುತ್ತಿರುವುದನ್ನು ವಿರೋಧಿಸಿ ರಾಜ್ಯಾದ್ಯಂತ ರೈತರು ಚಳುವಳಿಯಲ್ಲಿ ತೊಡಗಿರುವುದರಿಂದ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಭಯ ಹುಟ್ಟಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ರೈತರು ಕಾಂಗ್ರೆಸ್ ವಿರುದ್ದ ಮತಚಲಾಯಿಸಲಿದ್ದಾರೆಂಬುದು ಅರಿವಾಗಿ ಬೆಸ್ಕಾಂ ಎಂ.ಡಿ.ಯವರಿಗೆ ರೈತರ ಹಾಗೂ ಜಿಲ್ಲಾಧಿಕಾರಿ ಜೊತೆ ಸಭೆ ನಡೆಸುವಂತೆ ಸೂಚಿಸಿದ್ದಾರೆ.ರೈತರುತಮ್ಮಬದುಕಿಗಾಗಿಹೋರಾಟ ಚುರುಕುಗೊಳಿಸಬೇಕೆಂದು ಮನವಿ ಮಾಡಿದರು. ರೈತ ಮುಖಂಡರುಗಳಾದ ಕೆ.ಪಿ.ಭೂತಯ್ಯ, ಚಿಕ್ಕಪ್ಪನಹಳ್ಳಿರುದ್ರಸ್ವಾಮಿ, ಬಿ.ಓ.ಶಿವಕುಮಾರ್, ಎಂ.ಲಕ್ಷ್ಮೀಕಾಂತ್, ಓ.ಪಿ.ಟಿ.ಸ್ವಾಮಿ, ಸಿ.ನಾಗರಾಜು ಮುದ್ದಾಪುರ, ಕೃಷ್ಣಪ್ಪ, ರವಿ ಕೋಗುಂಡೆ, ಕೆ.ಸಿ.ಹೊರ ಕೇರಪ್ಪ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### ದಿಶಾ ಸಮಿತಿ ಸಭೆ

» ದಾವಣಗೆರೆ

ಲೋಕಸಭಾ ಸದಸ್ಯರಾದ ಡಾ.ಜಿ.ಎಂ.ಸಿದ್ದೇಶ್ವರ ಅಧ್ಯಕ್ಷತೆಯಲ್ಲಿ ಅ.31 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಸಭೆಯನ್ನು ಆಯೋಜಿಸಲಾಗಿದೆ ಎಂದುಜಿ.ಪಂಮುಖ್ಯಕಾರ್ಯನಿರ್ವಾಹಣಾಧಿಕಾರಿ ಸುರೇಶ್ ಬಿ ಇಟ್ನಾಳ್ ತಿಳಿಸಿದ್ದಾರೆ.

### ಬಾಲಕಾರ್ಮಿಕರಿಗೆ ಜ್ಞಾನದ ಅರಿವು ಮೂಡಿಸಲು ಅಧಿಕಾರಿಗಳು ಕ್ರಮವಹಿಸಬೇಕು: ಡಿಸಿ

» ದಾವಣಗೆರೆ

ಜಿಲ್ಲೆಯಲ್ಲಿ ಕೃಷಿ, ಕೈಗಾರಿಕೆ ಹಾಗೂ ಹೋಟೆಲ್‌ಗಳಲ್ಲಿ ಹೆಚ್ಚಾಗಿ ಬಾಲ ಕಾರ್ಮಿಕರನ್ನು ತೊಡಗಿಸಿಕೊಳ್ಳುತ್ತಿದ್ದು, ಇಲಾಖಾವಾರು ಅಧಿಕಾರಿಗಳು ಸಮೀಕ್ಷೆ ನಡೆಸಿ ಬಾಲ ಕಾರ್ಮಿಕರನ್ನು ಗುರುತಿಸಿ, ಅವರಿಗೆ ಜ್ಞಾನದ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.ಬುಧವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಬಾಲ ಹಾಗೂ ಕಿಶೋರ ಕಾರ್ಮಿಕ ನಿರ್ಮೂಲನೆ ಕುರಿತು ಜಿಲ್ಲಾ ಮಟ್ಟದ ಕಾರ್ಯಕಾರಿಣಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಮಕ್ಕಳ ರಕ್ಷಣೆಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಲಾಗಿದ್ದು, ಜಿಲ್ಲೆಯಲ್ಲಿ ಕೃಷಿ, ಕೈಗಾರಿಕೆ, ಮಂಡಕ್ಕಿ ಭಟ್ಟಿ, ಇಟ್ಟಿಗೆ ಭಟ್ಟಿ, ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿದೆ. ಅಂತಹ ಪ್ರದೇಶಗಳಲ್ಲಿ ಅಧಿಕಾರಿಗಳು ಸಮೀಕ್ಷೆ ನಡೆಸಿ ಅಂತಹ ಮಾಲಿಕರ ಮೇಲೆ ಕಾನೂನು ಕ್ರಮ ಕೈಗೊಂಡು ದಂಡ ವಿಧಿಸಬೇಕು.ಮಕ್ಕಳ ರಕ್ಷಣೆ ಮಾಡಿದ ನಂತರ ಮತ್ತೆ ಆ ಮಗು ಅದೇ ಕೆಲಸಕ್ಕೆ ಹೋಗಲಾರದಂತೆ ಕ್ರಮವಹಿಸಿ ಮಕ್ಕಳ ಕುಟುಂಬಕ್ಕೆ ಸಾಮಾಜಿಕ ಭದ್ರತೆಯ ಸರ್ಕಾರದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಸಹಕರಿಸಬೇಕು ಎಂದರು.

# ವಾಸವಿ ದೇವಸ್ಥಾನದಲ್ಲಿ ವೈಭವದ ದಸರಾ ಉತ್ಸವ

## ಗೋಪೂಜೆ ಮೂಲಕ ಗೋವುಗಳ ಸಂರಕ್ಷಣೆಗೆ ನಾವೆಲ್ಲರೂ ಸಂಕಲ್ಪ ಮಾಡೋಣ: ಜಪಾನಂದಸ್ವಾಮೀಜಿ

» ಚಳ್ಳಕೆರೆ





ಕಳೆದ ನೂರಾರು ವರ್ಷಗಳಿಂದ ಈ ಪುಣ್ಯಭೂಮಿಯಲ್ಲಿ ಗೋಮಾತೆಯನ್ನು ಪೂಜಿಸುವ ಪರಂಪರೆಯನ್ನು ನಾವು ಉಳಿಸಿಕೊಂಡು ಬಂದಿದ್ದೇವೆ. ಗೋಮಾತೆ ಪೂಜೆಯಿಂದ ನಾವು ನಮ್ಮ ಸಂಸ್ಕೃತಿ, ಸಂಸ್ಕಾರವನ್ನು ರಕ್ಷಣೆ ಮಾಡುವುದಲ್ಲದೆ, ಗೋವು ನಮ್ಮೆಲ್ಲರಿಗೂ ಸರ್ವಶ್ರೇಷ್ಠವಾದ ಮಾತೆ ಎಂಬುವುದನ್ನು ನಿರೂಪಿಸುತ್ತೇವೆ. ಇಂತಹ ಪುಣ್ಯ ಕಾರ್ಯದಲ್ಲಿ ಭಾಗಿಯಾಗುವ ಮೂಲಕ ನಾವೆಲ್ಲರೂ ನವರಾತ್ರಿ ಉತ್ಸವದ ಧ್ಯೇಯವಾಕ್ಯವಾದ ಗೋಸಂರಕ್ಷಣೆಗೆ ಸಂಕಲ್ಪ ಮಾಡೋಣವೆಂದು ಪಾವಗಡ ರಾಮಕೃಷ್ಣ ಸೇವಾಶ್ರಮದ ಜಪಾನಂದಸ್ವಾಮೀಜಿ ತಿಳಿಸಿದರು. ಅವರು, ನಗರದ ವಾಸವಿ ದೇವಸ್ಥಾನದಲ್ಲಿ ಆರ್ಯವೈಶ್ಯ ಸಂಘಟನೆ ಯುವ ಘಟಕ, ಮಹಿಳಾ ಘಟಕ ನವರಾತ್ರಿ ಹಿನ್ನೆಲೆ ಹಮ್ಮಿಕೊಂಡಿದ್ದ ಗೋಸಂರಕ್ಷಣೆ ಮತ್ತು ಶರನವರಾತ್ರಿ ಉತ್ಸವದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕಳೆದ ನೂರಾರು ವರ್ಷಗಳಿಂದ ಕೇವಲ ನಮ್ಮಲ್ಲಿ ಮಾತ್ರ ಗೋಪೂಜೆ ನಡೆಯುತ್ತಿತ್ತು. ಇಂದು ವಿಶ್ವದ ಅನೇಕ ರಾಷ್ಟ್ರಗಳು ಭಾರತೀಯ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಅನುಸರಿಸುತ್ತಾ ಬಂದಿವೆ. ವಿದೇಶದಲ್ಲೂ ಸಹ ಇಂದು ನಮ್ಮ ಗೋಮಾತೆ ಪೂಜೆ ಮಾಡಿಸಿಕೊಳ್ಳುವಷ್ಟು ಮಹತ್ವವನ್ನು ಪಡೆದಿದೆ. ನಾವೆಲ್ಲರೂ ಗೋಸಂರಕ್ಷಣೆ ಕಾರ್ಯಕ್ರಮಲ್ಲಿ ಭಾಗವಹಿಸಬೇಕಲ್ಲದೆ, ಗೋ ಸಂತತಿಯನ್ನು ಉಳಿಸಿಬೆಳೆಸುವತ್ತ ಗಮನ ನೀಡೋಣವೆಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಆರ್ಯವೈಶ್ಯ ಮಹಿಳಾ ಸಂಘದ ಅಧ್ಯಕ್ಷೆ ಜ್ಯೋತಿನಾಗರಾಜು, ನವರಾತ್ರಿ ಉತ್ಸವದ ಹಿನ್ನೆಲೆಯಲ್ಲಿ ಗೋಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಮಹಿಳಾ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದೀರಿ, ಕಾರ್ಯಕ್ರಮದಲ್ಲಿ ಸ್ವಾಮೀಜಿ ಭಾಗವಹಿಸಿ ಗೋಸಂರಕ್ಷಣೆಯ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ನಾವೆಲ್ಲರೂ ಗೋಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದರು.

ಆರ್ಯವೈಶ್ಯ ಯುವ ಸಂಘದ ಅಧ್ಯಕ್ಷ ಆರ್.ಚೇತನ್‌ಕುಮಾರ್ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಯುವಜನ ಸಂಘದ ವತಿಯಿಂದ ವೈಭವದ ನವರಾತ್ರಿ ಉತ್ಸವ ಹಮ್ಮಿಕೊಂಡಿದ್ದೇವೆ. ಗೋಪೂಜೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಇದರಲ್ಲಿ ಭಾಗವಹಿಸಿದ ಎಲ್ಲರನ್ನೂ ಅಭಿನಂದಿಸುವುದಾಗಿ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಆರ್ಯವೈಶ್ಯ ಸಂಘದ ಅಧ್ಯಕ್ಷ ಪಿ.ಎಂ.ಕೃಷ್ಣಮೂರ್ತಿ, ಪ್ರತಿವರ್ಷವೂ ವಾಸವಿ ಸನ್ನಿಧಿಯಲ್ಲಿ ಹಲವಾರು ಪೂಜಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವ ಮೂಲಕ ನಾವೆಲ್ಲರೂ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕು. ಮುಂದಿನ ದಿನಗಳಲ್ಲೂ ಸಹ ತಮ್ಮೆಲ್ಲರ ಸಹಕಾರದಿಂದ ದೇವತಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತವೆ ಎಂದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಪಿ.ಆರ್.ಪದ್ಮನಾಭ, ಕಾರ್ಯದರ್ಶಿ ಎ.ಎನ್.ಚಿದಾನಂದಗುಪ್ತ, ಮಹಿಳಾ ಸಂಘದ ಕಾರ್ಯದರ್ಶಿ ಲತಾಬಾಬು, ಯುವ ಘಟಕದ ಉಪಾಧ್ಯಕ್ಷ ಕಾರ್ತಿಕ್‌ಅನಂತ್, ಕಾರ್ಯದರ್ಶಿ ಟಿ.ಬಿ.ಅಭಿಷೇಕ್,ಹಿರಿಯಸಹಕಾರಿದುರೀಣ ಸಿ.ಬಿ.ಆದಿಭಾಸ್ಕರಶೆಟ್ಟಿ, ಗೋಸಂರಕ್ಷಣಾ ಸಮಿತಿ ಸಂಚಾಲಕ ಸಿ.ಪಿ.ಮಹೇಶ್, ಸಿದ್ದೇಶ್ ಉಪಸ್ಥಿತರಿದ್ದರು.

# 7 ಗಂಟೆಗಳ ಕಾಲ ತಡೆರಹಿತ ವಿದ್ಯುತ್ ನೀಡಿ

» ಚಳ್ಳಕೆರೆ



ತಾಲ್ಲೂಕಿನಾದ್ಯಂತ ಕೇವಲ ಕೆಲವೇ ಎಕರೆ ಪ್ರದೇಶಗಳಲ್ಲಿ ಅಲ್ಪಬೆಳೆ ಇದ್ದು, ಅವುಗಳಿಗೂ ಸಹ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ. ನೀರಾವರಿ ಸೌಲಭ್ಯ ಕಡಿಮೆ ಇದ್ದರೂ ರೈತರೂ ನೀರಾವರಿ ಬೆಳೆಗಳ ಸಂರಕ್ಷಣೆಗೆ ಮುಂದಾಗಬೇಕಿದೆ. ಸರ್ಕಾರ ಸೂಚನೆಯಂತೆ ಪ್ರತಿನಿತ್ಯ ಐದು ಗಂಟೆಗಳ ಕಾಲ ವಿದ್ಯುತ್ ನೀಡಬೇಕೆಂದು ಒತ್ತಾಯಿಸಿ ಬೆಸ್ಕಾಂ ಕಚೇರಿ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನೂರಾರು ರೈತರು ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನುಉದ್ದೇಶಿಸಿ ಮಾತನಾಡಿದ ರಾಜ್ಯ ರೈತ ಸಂಘ ಹಿರಿಯ ಉಪಾಧ್ಯಕ್ಷ ಕೆ.ಪಿ.ಭೂತಯ್ಯ ಮಾತನಾಡಿ, ರಾಜ್ಯ ಸರ್ಕಾರ ಪ್ರತಿನಿತ್ಯ ಐದು ಗಂಟೆಗಳ ಕಾಲ ವಿದ್ಯುತ್ ನೀಡುವಂತೆ ಆದೇಶ ನೀಡಿದೆ. ರೈತರು ತಮ್ಮ ಜಮೀನಿನಲ್ಲಿಯೇ ವಾಸವಿದ್ದು ಕರೆಂಟ್ ಇರುವ ಸಂದರ್ಭದಲ್ಲಿ ಬೆಳೆಗಳಿಗೆ ನೀರು ಬಿಡುತ್ತಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಬೆಸ್ಕಾಂ ಕೇವಲ ನಾಲ್ಕು ಗಂಟೆಗಳ ಕಾಲ ವಿದ್ಯುತ್ ನೀಡುತ್ತಿದ್ದು, ಅದು ನಿರಂತರ ನೀಡದೆ ಬೆಳಗ್ಗೆ, ಮಧ್ಯಾಹ್ನ ತಲಾ ಎರಡು ಗಂಟೆ ಮಾತ್ರ ನೀಡುತ್ತಾರೆ. ಇದರಿಂದ ಜಮೀನಿಗೆ ಪೂರ್ಣ ಪ್ರಮಾಣದಲ್ಲಿ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ರೈತರಿಗೆ ಕಡೆಪಕ್ಷ ಪ್ರತಿದಿನ ಐದು ಗಂಟೆ ಬದಲಾಗಿ ಏಳು ಗಂಟೆಗಳ ಕಾಲ ವಿದ್ಯುತ್ ನೀಡಬೇಕೆಂದು ಒತ್ತಾಯಿಸಿದರು.

ಎಇಇ ರಾಜು ಮಾತನಾಡಿ, ರೈತರ ಸಂಕಷ್ಟದ ಬಗ್ಗೆ ಇಲಾಖೆಗೆ ಅರಿವಿದೆ. ರೈತರಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಇಲಾಖೆ ಜಾಗೃತಿ ವಹಿಸಿದೆ. ವಿದ್ಯುತ್ ಸಂಪರ್ಕವನ್ನು ಐದು ಗಂಟೆಗಳ ಕಾಲ ನಿರಂತರ ನೀಡಲು ಇಲಾಖೆಗೂ ಹಲವಾರು ಸಮಸ್ಯೆಗಳಿವೆ. ಕರೆಂಟ್ ಉತ್ಪಾದನೆಗೆ ಬೇಕಿರುವ ನೀರು ಸಿಗುತ್ತಿಲ್ಲ, ಎಲ್ಲೂ ಮಳೆ ಇಲ್ಲ, ಇರುವ ಕರೆಂಟ್ ವ್ಯವಸ್ಥೆಯಲ್ಲಿಯೇ ಎಲ್ಲವನ್ನೂ ಪೂರೈಸಬೇಕಿದೆ. ಏಳು ಗಂಟೆಗಳ ಕಾಲ ನಿರಂತರ ವಿದ್ಯುತ್ ನೀಡುವ ಬಗ್ಗೆ ಅಧಿಕಾರಿಗಳಿಗೆ ವರದಿ ನೀಡಿ ಅವರಿಂದ ಆದೇಶ ಬಂದನಂತರ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದರು.

ತಳಕು ಎಇಇ ತಿಮ್ಮರಾಜು, ರೈತ ಮುಖಂಡರಾದ ಬೂದಿಹಳ್ಳಿ ರಾಜಣ್ಣ, ಆರ್.ಎ.ದಯಾನಂದಮೂರ್ತಿ, ತಾಲ್ಲೂಕು ಅಧ್ಯಕ್ಷ ಟಿ.ಹಂಪಣ್ಣ ಮುಂತಾದವರು ಉಪಸ್ಥಿತರಿದ್ದರು.

## ಸರ್ಕಾರಿ ಪದವಿಪೂರ್ವ ಕಾಲೇಜಿಗೆ ರಾಷ್ಟ್ರೀಯ ಸೇವಾ ಯೋಜನಾ ಘಟಕದ ರಾಜ್ಯ ಪ್ರಶಸ್ತಿ



» ಚಳ್ಳಕೆರೆ

ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಬಿ.ಶಾಂತಕುಮಾರಿಯವರಿಗೆ ಇತ್ತೀಚೆಗೆ ರಾಜಭವನದಲ್ಲಿ ರಾಜ್ಯಪಾಲರಿಂದ ಉತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎಂಬ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಅವರನ್ನು ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕ ವರ್ಗ ಸನ್ಮಾನಿಸಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಎಂ.ರವೀಶ್ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನಾ ಘಟಕ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವ ಮೂಲಕ ರಾಜ್ಯಮಟ್ಟದ ಪ್ರಶಸ್ತಿಗೆ ಆಯ್ಕೆಯಾಯಿತು. ಈ ಕಾರ್ಯಕ್ರಮ ಪೂರ್ಣಹೊಣೆಗಾರಿಕೆ ಹೊತ್ತು ಕಾರ್ಯನಿರ್ವಹಿಸಿದ ನಮ್ಮ ಕಾಲೇಜಿಗೆ ರಸಾಯಶಾಸ್ತ್ರ ಉಪನ್ಯಾಸಕಿ ಬಿ.ಶಾಂತಕುಮಾರ್ ರಾಜ್ಯಮಟ್ಟದ ಪ್ರಶಸ್ತಿ ಪಡೆಯುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಜೊತೆಯಲ್ಲೇ ನಮ್ಮ ಕಾಲೇಜಿಗೂ ಸಹ ಈ ಪ್ರಶಸ್ತಿ ಲಭ್ಯವಾಗುವಂತೆ ಮಾಡಿದ್ದಾರೆ. ಕಾಲೇಜಿನ ಎಲ್ಲಾ ಉಪನ್ಯಾಸಕರು, ಕಾಲೇಜು ಅಭಿವೃದ್ಧಿ ಸಮಿತಿ ಹಾಗೂ ವಿದ್ಯಾರ್ಥಿಗಳ ಪರವಾಗಿ ಅಭಿನಂದಿಸುವುದಾಗಿ ತಿಳಿಸಿದರು.


ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕರಾದ ಮಹಂತೇಶ್ ಮತ್ತು ರಾಜಶೇಖರ್ ಮಾತನಾಡಿ, ಬಿ.ಶಾಂತಕುಮಾರಿಯವರ ಕರ್ತವ್ಯನಿಷ್ಠೆ ಎಲ್ಲರಿಗೂ ಮಾದರಿ. ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಗಳೊಂದಿಗೆ ಉಪನ್ಯಾಸದಲ್ಲೂ ಸಹ ಅವರು ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದರು.ಉಪನ್ಯಾಸಕರಾದ ವಸಂತಕುಮಾರ್, ಪುಷ್ಪಲತಾ, ನಾಗರಾಜುಬೆಳಗಟ್ಟ, ಚಂದ್ರಶೇಖರ್, ಮುಜೀಬುಲ್ಲಾ ಮುಂತಾದವರು ಉಪಸ್ಥಿತರಿದ್ದರು.

## ಕಾಣೆಯಾದವರ ಪತ್ತೆಗಾಗಿ ಮನವಿ

ದಾವಣಗೆರೆ: ದಾವಣಗೆರೆ ಹಳೇ ಚಿಕ್ಕನಹಳ್ಳಿ ನಿವಾಸಿಯಾದ ಎಂ.ಕೆ ಮಂಜುನಾಥ 53 ವರ್ಷ, ಆದಿ ಕರ್ನಾಟಕ ಜನಾಂಗ, ಇವರು ಹಮಾಲಿ ಕೆಲಸ ಮಾಡಿಕೊಂಡಿದ್ದು, 2023 ರ ಜನವರಿ 25 ರಂದು ಬೆಳಿಗ್ಗೆ 11.30 ಗಂಟೆಗೆ ಮನೆಯಿಂದ ಹೋದವರು ವಾಪಾಸ್ ಮನೆಗೆ ಬಾರದೆ ಕಾಣೆಯಾಗಿರುತ್ತಾರೆ ಚಹರೆ ವಿವರ ಎತ್ತರ 5 ಅಡಿ, ಕೋಲು ಮುಖ, ಗೋಧಿ ಮೈಬಣ್ಣ, ಸಾಧರಣ ಮೈಕಟ್ಟು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಅಂಗಿ ಮತ್ತು ಪಂಚೆ ಧರಿಸಿರುತ್ತಾರೆ ಎಂದು ಆಜಾದ್ ನಗರ ಠಾಣೆಯ ಪೊಲೀಸ್ ವೃತ್ತ ನಿರೀಕ್ಷಕ ಬಾಲಚಂದ್ರ ನಾಯಕ್ ತಿಳಿಸಿದ್ದಾರೆ.

# 20ರಿಂದ ಬಾದರದಿನ್ನಿ ರಂಗೋತ್ಸವ

» ಚಿತ್ರದುರ್ಗ



ಬಾದರದಿನ್ನಿಆರ್ಟ್ಸ್‌ಅಕಾಡೆಮಿಚಿತ್ರದುರ್ಗ,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 20 ಮತ್ತು 21ರಂದು ಸಂಜೆ 5.30ಕ್ಕೆ ಚಿತ್ರದುರ್ಗ ನಗರ ತರಾಸು ರಂಗಮಂದಿರದಲ್ಲಿ ಬಾದರದಿನ್ನಿ ರಂಗೋತ್ಸವ–ಗೀತ ಗಾಯನ, ನಾಟಕಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಅ. 20ರಂದು ಸಂಜೆ 5.30ಕ್ಕೆ ನಗರ ತರಾಸು ರಂಗಮಂದಿರದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸಾನಿಧ್ಯ ವಹಿಸುವರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಂ.ವೀರೇಶ್ ಅಧ್ಯಕ್ಷತೆ ವಹಿಸುವರು. ನೀನಾಸಂ ಪದವೀಧರೆ ಹಾಗೂ ಕಿರುತೆರೆ ಮತ್ತು ಚಿತ್ರನಟಿ ಸಿತಾರ ಉದ್ಘಾಟನೆ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಸಾಹಿತಿ ಡಾ.ಲೋಕೇಶ ಅಗಸನಕಟ್ಟೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ, ರಂಗಕರ್ಮಿ ಹಾಗೂ ಚಲನಚಿತ್ರ ನಿರ್ದೇಶಕ ಉಮೇಶ್ ಬಾದರದಿನ್ನಿ ಭಾಗವಹಿಸುವರು. ಬಾದರದಿನ್ನಿ ಆರ್ಟ್ಸ್ ಅಕಾಡೆಮಿ ಅಧ್ಯಕ್ಷೆ ಅನಸೂಯ ಬಾದರದಿನ್ನಿ ಉಪಸ್ಥಿತಿವಹಿಸುವರು. ಉದ್ಘಾಟನಾ ಸಮಾರಂಭದ ನಂತರ ಉಮೇಶ್ ಬಾದರದಿನ್ನಿ ರಚನೆಯ, ಯುವರಾಜ ನಾಯ್ಕ್ ನಿರ್ದೇಶನ, ಸುಜೀತ್ ಕುಲಕರ್ಣಿ ಅವರ ಸಂಗೀತ, ಗಂಗಾಧರ್ ಅವರ ಗಾಯನ ಹಾಗೂ ಬಾದರದಿನ್ನಿ ಆರ್ಟ್ಸ್ ಅಕಾಡೆಮಿ ಕಲಾವಿದರು ಅಭಿನಯದ "ಒಂದು ಸಾವಿನ ಸುತ್ತ" ನಾಟಕ ಪ್ರದರ್ಶನ ನಡೆಯಲಿದೆ.

ಅ.21ರಂದು ಸಂಜೆ 5.30ಕ್ಕೆ ನಗರ ತರಾಸು ರಂಗಮಂದಿರದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಎನ್‌ಎಸ್‌ಡಿ ಪದವೀಧರ ಹಾಗೂ ರಂಗಕರ್ಮಿ ಸಾಂಬಶಿವ ದಳವಾಯಿ, ರಂಗನಿರ್ದೇಶಕರು ಹಾಗೂ ನೀನಾಸಂ ಪದವೀಧರ ಕೆ.ಪಿ.ಎಂ. ಗಣೇಶಯ್ಯ, ಹಿರಿಯ ಕಲಾವಿದ ಹಾಗೂ ಸಮಾಜ ಸೇವಕ ಆರ್.ಶೇಷಣ್ಣ ಕುಮಾರ್, ರಂಗಕರ್ಮಿ ಸಿ.ಪಿ.ಜ್ಞಾನದೇವ, ಗಾಯಕ ಡಿ.ಓ.ಮುರಾರ್ಜಿ ಭಾಗವಹಿಸುವರು. ಚನ್ನಬಸಣ್ಣ ಮತ್ತು ತಂಡದವರಿಂದ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ.

ಸಮಾರಂಭದ ನಂತರ ಏಕವ್ಯಕ್ತಿ ರಂಗ ಪ್ರಯೋಗ "ತಾಯಿಯಾಗುವುದೆಂದರೆ" ನಾಟಕ ಪ್ರದರ್ಶನ ನಡೆಯಲಿದೆ. ಕೃಷ್ಣಮೂರ್ತಿ ಕವಾತ್ತರ್ ಅವರ ನಿರ್ದೇಶನ, ರಂಗರೂಪ, ಸಂಗೀತವಿದೆ. ಪೂಜಾ ರಘುನಂದನ್ ಅಭಿನಯಿಸುವರು. ಹಾಸನದ ರಂಗಹೃದಯ ತಂಡದವರು ನಾಟಕ ಪ್ರಸ್ತುತ ಪಡಿಸುವರು ಎಂದು ಬಾದರದಿನ್ನಿ ಆರ್ಟ್ಸ್ ಅಕಾಡೆಮಿ ಕಾರ್ಯದರ್ಶಿ ಪ್ರಕಾಶ್ ಬಾದರದಿನ್ನಿ ತಿಳಿಸಿದ್ದಾರೆ.

## ಪ್ರಮುಖ ಸುದ್ದಿ

# ಮೃತ ಸಾಗರ್ ಕುಟುಂಬಕ್ಕೆ ಸದ್ಗುರು ಆಯುರ್ವೇದ ಸಂಸ್ಥೆ ನೆರವು

» ಹೊಸದುರ್ಗ

ಪಟ್ಟಣದ ಎನ್ ಇ ಎಸ್ ಬಡಾವಣೆ ನಿವಾಸಿ ಕಾರ್ ಮೆಕಾನಿಕ್ ಸಾಗರ್ ಅವರು ಇತ್ತೀಚಿಗೆ ತಾನು ಕೆಲಸ ಮಾಡುತ್ತಿದ್ದ ಅಂಗಡಿಯಲ್ಲಿ ಕಾರ್ ರಿಪೇರಿ ಮಾಡುವಾಗ ಆಕಸ್ಮಿಕವಾಗಿ ಕಾರ್ ತನ್ನ ಎದೆಯ ಮೇಲೆ ಬಿದ್ದ ಪರಿಣಾಮವಾಗಿ ಮೆಕಾನಿಕ್ ಸಾಗರ್ ಸ್ಥಳದಲ್ಲಿಯೇ ಮೃತಪಟ್ಟರು, ಸಾಗರ್ ಅವರಿಗೆ ಹೆಂಡತಿ ಮತ್ತು ಎರಡು ಮಕ್ಕಳಿದ್ದು, ಜೀವನ ನಿರ್ವಹಣೆಗೆ ಸಾಗರ್ ರವರು ಬದುಕಿಗೊಂದು ಸೂರು ಕಟ್ಟಿಕೊಳ್ಳಬೇಕೆಂಬ ಕನಸು ಹೊತ್ತಿದ್ದ, ಆ ಕನಸು ಅವನ ಮರಣ ನಂತರ ಕಮರಿತು,ತಕ್ಷಣ ನೆರವಿಗೆ ಧಾವಿಸಿದ ಸದ್ಗುರು ಆಯುರ್ವೇದ ಸಂಸ್ಥೆ ಸಾಗರ್ ಮನೆ ಕಟ್ಟಿಸುತ್ತಿದ್ದು ಕಾಮಗಾರಿ ಮರಣ ನಂತರ ಅರ್ಧಕ್ಕೆ ನಿಂತು ಹೋಯಿತು, ಅಲ್ಲಿಗೆ ಧಾವಿಸಿದ ಸದ್ಗುರು ಸಂಸ್ಥೆಯ ಮುಖ್ಯಸ್ಥ ಡಿಎಸ್ ಪ್ರದೀಪ್ ರವರು ಸಾಗರ್ ಮನೆಗೆ ಸಂಪೂರ್ಣವಾಗಿ ಬಣ್ಣ ಬಳಿಸುವ ಜವಾಬ್ದಾರಿ ಹೊತ್ತು ಇಂದು ಆ ಮನೆ ಗೃಹ ಪ್ರವೇಶಕ್ಕಾಗಿ ಸಿದ್ದಗೊಂಡಿದೆ. ಸಾಗರ್ ರವರ ಹತ್ತಾರು ಸ್ನೇಹಿತರು ನೂತನ ಮನೆ ನಿರ್ಮಾಣಕ್ಕೆ ಸಹಕರಿಸಿದ್ದು ಇವರ ಸೇವೆ ಪ್ರಸ್ತುತ ಸ್ವಾರ್ಥ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ,



ಹೊಸದುರ್ಗ ಪಟ್ಟಣದ ಎನ್ ಇ ಎಸ್ ಬಡಾವಣೆ ನಿವಾಸಿ ಕಾರ್ ಮೆಕಾನಿಕ್ ಮೃತ ಸಾಗರ್ ಮನೆ ಸುಣ್ಣ ಬಣ್ಣದಿಂದ ಕೂಡಿರುವುದು



ಹೊಸದುರ್ಗ ಪಟ್ಟಣದ ಎನ್ ಇ ಎಸ್ ಬಡಾವಣೆ ನಿವಾಸಿ ಕಾರ್ ಮೆಕಾನಿಕ್ ಮೃತ ಸಾಗರ್ ಅವರ ಕುಟುಂಬದೊಂದಿಗೆ ಮತನಾಡುತ್ತಿರುವ ಡಿ.ಎಸ್, ಪ್ರದೀಪ್

> ಹೊಸದುರ್ಗದಲ್ಲಿ ಅತ್ಯುತ್ತಮ ಕಾರ್ ಮೆಕಾನಿಕ್ ಆಗಿದ್ದ ಸಾಗರ್ ಅಕಾಲಿಕ ಮರಣಕ್ಕೆ ತುತ್ತಾಗಿ ಕುಟುಂಬ ತುಂಬಾ ಸಂಕಷ್ಟದಲ್ಲಿತ್ತು, ಈ ಕುಟುಂಬಕ್ಕೆ ಅಳಿಲು ಸೇವೆಯನ್ನು ನಮ್ಮ ಸದ್ಗುರು ಸಂಸ್ಥೆ ಮಾಡಿದೆ, ಪ್ರಸ್ತುತ ಸಮಾಜದಲ್ಲಿ ಉಳ್ಳವರು ನೊಂದ ಕುಟುಂಬಗಳಿಗೆ ಸಹಾಯ ಹಸ್ತ ನೀಡುವ ಮುಖಾಂತರ ಮಾನವೀಯತೆ ಮೆರೆಯಬೇಕಾಗಿದೆ. ಸಾಗರ್ ಅವರ ಶ್ರೀಮತಿಯಾವರಾದ ಪೂಜಾ ರವರಿಗೆ ನಮ್ಮ ಕಂಪನಿಯಲ್ಲಿ ಉದ್ಯೋಗ ನೀಡಲಾಗುವುದು.
>
> » ಡಿ.ಎಸ್, ಪ್ರದೀಪ್, ಮಾಲೀಕರು, ಸದ್ಗುರು ಆಯುರ್ವೇದ ಸಂಸ್ಥೆ ಹೊಸದುರ್ಗ

## ಫಾಸ್ಟ್ ನ್ಯೂಸ್

### ಚೀಟಿ ಸಂಸ್ಥೆಯ ನೋಂದಣಿ ರದ್ದತಿಗೆ ಕ್ರಮ

» **ಚಿತ್ರದುರ್ಗ**

ಚಿತ್ರದುರ್ಗ ನಗರದ ಫಿಲ್ಟರ್ ಹೌಸ್ ರಸ್ತೆಯ ಗೌರಿಶಂಕರ ನಿಲಯದಲ್ಲಿರುವ ಪರಿಶ್ರಮ ಚಿಟ್ಸ್ ಪ್ರೈವೇಟ್ ಲಿಮಿಟೆಡ್ ಇವರು ಚೀಟಿ ವ್ಯವಹಾರ ನಡೆಸಲು ನೀಡಿರುವ ಅನುಮತಿಯನ್ನು ರದ್ದುಪಡಿಸಲು ಕೋರಿ ನಿಬಂಧಕರಿಗೆ ಅರ್ಜಿ ಸಲ್ಲಿಸಿದ್ದು, ಈ ಚೀಟಿ ಸಂಸ್ಥೆಯನ್ನು ರದ್ದುಪಡಿಸಲು ನಿಯಮಾನುಸಾರ ಕ್ರಮವಹಿಸಲಾಗಿದೆ. ಈ ಚೀಟಿ ಸಂಸ್ಥೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ಅಥವಾ ತಕರಾರುಗಳು ಇದ್ದಲ್ಲಿ ಈ ಪ್ರಕಟಣೆಯಾದ ದಿನದಿಂದ 10 ದಿನಗಳ ಒಳಗಾಗಿ ಚೀಟಿ ನಿಧಿಗಳ ಉಪನಿಬಂಧಕರು, ಸಹಕಾರ ಸೌಧ, ಬಿ.ಎಲ್.ಗೌಡ ಲೇ-ಔಟ್, ಚಿತ್ರದುರ್ಗ ಇವರಿಗೆ ಸಲ್ಲಿಸಬಹುದು ಎಂದು ಸಹಕಾರ ಸಂಘಗಳ ಉಪನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸರ್ಕಾರಿ ನೌಕರರ ಕ್ರೀಡಾಕೂಟ

» **ಚಿತ್ರದುರ್ಗ**

2022-23ನೇ ಸಾಲಿನ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಇದೇ ಅಕ್ಟೋಬರ್ 27 ರಿಂದ 29 ರವರೆಗೆ ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ. 2022-23ನೇ ಸಾಲಿನ ಚಿತ್ರದುರ್ಗ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ವೈಯುಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಹಾಗೂ ಗುಂಪು ಆಟಗಳಲ್ಲಿ ಪ್ರಥಮ ಸ್ಥಾನ ಪಡೆದವರು ಮಾತ್ರ ಈ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಇಲಾಖೆಯಿಂದ ಗುರುತಿನ ಪತ್ರ ಪಡೆದು ಭಾಗವಹಿಸಬಹುದಾಗಿರುತ್ತದೆ. ಕ್ರೀಡಾಪಟುಗಳು ಅಕ್ಟೋಬರ್ 27ರಂದು ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಲು ಕೋರಲಾಗಿದೆ. ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಗುರುತಿನ ಪತ್ರವನ್ನು ರಾಜ್ಯ ಸರ್ಕಾರಿ ನೌಕರರ ಸಂಘ ಚಿತ್ರದುರ್ಗ ಘಟಕದ ಜಿಲ್ಲಾ ಕಾರ್ಯದರ್ಶಿ ಎಸ್.ಕೆ. ಮಂಜುನಾಥ ಅವರ ದೂರವಾಣಿ ಸಂಖ್ಯೆ 9844412448, ಜಿಲ್ಲಾ ಖಜಾಂಚಿ ಬಿ. ವಿರೇಶ್ ದೂರವಾಣಿ ಸಂಖ್ಯೆ 9880409874 ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವ್ಯಕ್ತಿ ಕಾಣೆ

» **ದಾವಣಗೆರೆ**

ಬಸಾಪುರದ ಎ.ಕೆ ಕಾಲೋನಿಯ ನಿವಾಸಿಯಾದ ಜಿ.ಸಂತೋಷ್23ವರ್ಷ,ನಾಯಕಜನಾಂಗದವರು ಇವರು ಮೈಸೂರು ಎಪ್ಸಾನ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದು, ಕಳೆದ 2023 ರ ಫೆಬ್ರವರಿ 4 ರಂದು ಮನೆಗೆ ಬರುತ್ತೇನೆಂದು ಹೇಳಿ, ಈವರೆಗೂ ಬಾರದೆ ಕಾಣೆಯಾಗಿರುತ್ತಾರೆ. ಚಹರೆ ವಿವರ. ಎತ್ತರ 5.7 ಅಡಿ, ದುಂಡು ಮುಖ, ಗೋಧಿ ಮೈಬಣ್ಣ,, ಸಾಧಾರಣ ಮೈಕಟ್ಟು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಪ್ಯಾಂಟ್, ಶರ್ಟ್ ಧರಿಸಿದ್ದು, ಹೊಟ್ಟೆಯ ಬಲಭಾಗದಲ್ಲಿ ಅಪೆಂಡಿಕ್ಸ್ ಆಪರೇಷನ್ ಗುರುತು ಇರುತ್ತದೆ. ಎಂದು ಆಜಾದ್ ನಗರ ಠಾಣೆಯ ಪೊಲೀಸ್ ವೃತ್ತ ನಿರೀಕ್ಷಕ ಬಾಲಚಂದ್ರ ನಾಯಕ್ ತಿಳಿಸಿದ್ದಾರೆ.

### ರಾಜ್ಯಮಟ್ಟ ಕ್ರೀಡಾಕೂಟಕ್ಕೆ ಸೋಮೇಶ್ವರ ವಿದ್ಯಾಲಯ ವಿದ್ಯಾರ್ಥಿಗಳು ಆಯ್ಕೆ




» **ದಾವಣಗೆರೆ**

ಶಾಲಾ ಶಿಕ್ಷಣ ಇಲಾಖೆವತಿಯಿಂದ ನಡೆದ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಶ್ರೀ ಸೋಮೇಶ್ವರ ವಿದ್ಯಾಲಯದ ನಾಲ್ಕು ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 110 ಮೀಟರ್ ತಡಕೆ ಓಟ ( ಹರ್ಡಲ್ ರನ್ ) ದಲ್ಲಿ ಸಾಗರ್ ಜಿ.ಆರ್. ಪ್ರಥಮ ಸ್ಥಾನ ಪಡೆದರೆ, ಕರಾಟೆಯಲ್ಲಿ ಶಾರದಾ ದೇವಿ ಕೆ.ಎಂ ಮೊದಲ ಸ್ಥಾನ ಪಡೆದಿದ್ದಾರೆ. ಇನ್ನೂ ಚದುರಂಗದಲ್ಲಿ ದೀಕ್ಷಿತ್ ಪಿ.ಎಂ. ಪ್ರಥಮಸ್ಥಾನಗಳಿಸಿದ್ದು, 80 ಮೀಟರ್ ತಡಕೆ ಓಟ ( ಹರ್ಡಲ್ ರನ್ )ದಲ್ಲಿ ವೇದೇಶ್ ಎಂ.ಜೆ. ಪ್ರಥಮ ಸ್ಥಾನಪಡೆದಿದ್ದಾರೆ. ಈ ನಾಲ್ಕು ವಿದ್ಯಾರ್ಥಿಗಳು ಇದೀಗ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದು ಪೋಷಕರು ಹಾಗೂ ಶಾಲೆಗೆ ಕೀರ್ತಿ ತಂದಿದ್ದು ರಾಜ್ಯಮಟ್ಟದ ಪಂದ್ಯದಲ್ಲಿ ಸ್ಪರ್ಧೆ ಮಾಡಲಿದ್ದಾರೆ. ಕ್ರೀಡೆಯಲ್ಲಿ ಸಾಧನೆಗೈಸಿದ ವಿದ್ಯಾರ್ಥಿಗಳಿಗೆ ಶಾಲಾ ಆವರಣದಲ್ಲಿ ಅಭಿನಂದನೆ ಸಲ್ಲಿಸಿ, ರಾಜ್ಯಮಟ್ಟದಲ್ಲೂ ಜಯ ಸಾಧಿಸಲೆಂದು ಶುಭಕೋರಲಾಯಿತು. ಈ ವೇಳೆ ಪ್ರಾಚಾರ್ಯರಾದ ಪ್ರಭಾವತಿ, ಆಡಳಿತ ಮಂಡಳಿಯ ಹರೀಶ್ ಬಾಬು, ಮುಖ್ಯಶಿಕ್ಷಕರಾದ ಗಾಯತ್ರಿ, ಮಾಲಾ, ಪ್ರಕಾಶ್ ಹಾಗೂ ದೈಹಿಕ ಶಿಕ್ಷಕರಾದ ಇಂದ್ರಮ್ಮ ಉಪಸ್ಥಿತರಿದ್ದರು.

# ಬೆಂಗಳೂರು ವಿಭಾಗ ಮಟ್ಟ, ರಾಜ್ಯ ಮಟ್ಟದ ಯೋಗಾಸನಾ ಸ್ಪರ್ಧೆಗೆ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಚಾಲನೆ

» **ಸಿರಿಗೆರೆ**

ಪಠ್ಯಕ್ರಮದಲ್ಲಿಯೋಗ,ಸಂಗೀತ,ನೃತ್ಯವನ್ನು ಸೇರಿಸುವ ಅಗತ್ಯವಿದೆ ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ರಾಜ್ಯ ಸರ್ಕಾರದ ಗಮನ ಸೆಳೆದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಹಯೋಗದೊಂದಿಗೆ ಸಿರಿಗೆರೆಯಲ್ಲಿ ಬುಧವಾರ ನಡೆದ 14 ರಿಂದ 17 ವರ್ಷ ವಯೋಮಿತಿಯೊಳಗಿನ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ-ಬಾಲಕಿಯರ ಬೆಂಗಳೂರು ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಯೋಗ ಎಂದರೆ ಕೇವಲ ಆಸನಗಳಲ್ಲ. ಯೋಗಾಸನ ಮನಸ್ಸನ್ನು ಹತೋಟಿಗೆ ತರುವ ಸಾಧನವಿದ್ದಂತೆ. ಯೋಗದಿಂದ ಶರೀರ ಮತ್ತು ಮನಸ್ಸಿಗೆ ಹತ್ತಿರದ ಸಂಬಂಧವಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧುಬಂಗಾರಪ್ಪ ಒಂದರಿಂದ ಹತ್ತನೆ ತರಗತಿವರೆಗೆ ಮಕ್ಕಳಿಗೆ ಕಡ್ಡಾಯವಾಗಿ ಯೋಗ ಶಿಕ್ಷಣ



ನೀಡಬೇಕೆಂದು ಪ್ರಸ್ತಾಪಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು ಯೋಗ, ಸಂಗೀತ, ನೃತ್ಯದಿಂದ ಮಕ್ಕಳ ಮನಸ್ಸು ಹದಗೊಳ್ಳುತ್ತದೆ ಎಂದು ತಿಳಿಸಿದರು.

ಶಿಕ್ಷಣವೆಂದರೆ ಕೇವಲ ತರಗತಿಗಷ್ಟೆ ಸೀಮಿತವಲ್ಲ. ಯೋಗದಿಂದ ಮಕ್ಕಳಲ್ಲಿ ಏಕಾಗ್ರತೆ ಮೂಡಿ ಶಿಸ್ತು ಬೆಳೆಯುತ್ತದೆ ಎಂದು ಯೋಗಕ್ಕಿರುವ ಮಹತ್ವ ತಿಳಿಸಿದರು. ಹೊಳಲ್ಕೆರೆ ಶಾಸಕ ಡಾ.ಎಂ. ಚಂದ್ರಪ್ಪ ಮಾತನಾಡಿ ಆರೋಗ್ಯಕ್ಕಿಂತ ದೊಡ್ಡ ಸಂಪತ್ತು ಬೇರೆ ಯಾವುದೂ ಇಲ್ಲ. ಸಿರಿಗೆರೆಯಲ್ಲಿ ಮಕ್ಕಳು ಯೋಗ ಪ್ರದರ್ಶಿಸುತ್ತಿರುವುದನ್ನು ನೋಡಿದರೆ ಮನಸ್ಸಿಗೆ ಸಂತೋಷವುಂಟಾಗುತ್ತದೆ. ದೇಶದ ಪ್ರಧಾನಿ ನರೇಂದ್ರ ಮೋದಿ ಯೋಗವನ್ನು ವಿಶ್ವಕ್ಕೆ ಪರಿಚಯಿಸಿದ್ದಾರೆ. ನಲವತ್ತು ವರ್ಷಗಳಿಂದ ನಾನು ಒಂದು ಮಾತ್ರೆ ಇಂಜೆಕ್ಷನ್ ತೆಗೆದುಕೊಂಡಿಲ್ಲ. ಆರೋಗ್ಯದಿಂದಿದ್ದೇನೆ. ಸಾರ್ವಜನಿಕರ ಬದುಕನ್ನು ಸ್ವಂತ ಬದುಕೆಂದು ತಿಳಿದುಕೊಂಡು ಲವಲವಿಕೆಯಿಂದ ಕೆಲಸ ಮಾಡುತ್ತಿರುವುದೆ ಉತ್ತಮ ಆರೋಗ್ಯಕ್ಕೆ ಕಾರಣ ಎಂದು ಹೇಳಿದರು.

ಇಸ್ರೇಲ್ ಮತ್ತು ಗಾಜಾಪಟ್ಟಿಯಲ್ಲಿ ನಡೆಯುತ್ತಿರುವ ಯುದ್ದದಲ್ಲಿ ಸಾವಿರಾರು ಜನ ಹತರಾಗಿದ್ದು, ಹಿಂಸೆಗೊಳಗಾದವರ ದುಃಖದಲ್ಲಿ ನಾವುಗಳು ಭಾಗಿಯಾಗೋಣ ಎಂದು ಒಂದು ನಿಮಿಷ ಮೌನ ಆಚರಿಸಿ ಶೀಘ್ರವೇ ಯುದ್ದ ಅಂತ್ಯಗೊಳ್ಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ವಿಧಾನಪರಿಷತ್‌ಸದಸ್ಯಕೆ.ಎಸ್.ನವೀನ್, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ನಾಗಭೂಷಣ್, ಶ್ರೀಮತಿ ಟಿ.ಜಿ.ಲೀಲಾವತಿ, ದೈಹಿಕ ಶಿಕ್ಷಣಾಧಿಕಾರಿ ಎ.ಪರಶುರಾಮಪ್ಪ, ಶ್ರೀಮತಿ ಮಂಜುಳ, ವೆಂಕಟೇಶಪ್ಪ, ಜಿಲ್ಲೆಯ ಎಲ್ಲಾ ದೈಹಿಕ ಶಿಕ್ಷಕರು ಈ ಸಂದರ್ಭದಲ್ಲಿ ಹಾಜರಿದ್ದರು.

# ಪ್ರಧಾನಿ ಮೋದಿ ಮನೆಗೆ ಕಳಿಸುವ ಕಾಲ ದೂರವಿಲ್ಲ: ತಿಮ್ಮಾಪುರ ಭವಿಷ್ಯ



» **ಚಿತ್ರದುರ್ಗ**

ಅದಾನಿ,ಅಂಬಾನಿಯನ್ನುಪೋಷಿಸಿಬೆಳೆಸುತ್ತಿರುವ ದೇಶದ ಪ್ರಧಾನಿ ನರೇಂದ್ರಮೋದಿಯನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದೇಶದ ಜನ ಸೋಲಿಸಿ ಮನೆಗೆ ಕಳಿಸುವ ಸಮಯ ಬಂದಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕೋಮುವಾದಿ ಬಿಜೆಪಿ.ಯನ್ನು ದೇಶದಿಂದ ಹೊರ ಹಾಕಬೇಕಿದೆ. ರಾಜ್ಯದಲ್ಲಿ ಬರಗಾಲವಿದ್ದು, ರೈತರು ಜನಸಾಮಾನ್ಯರು ತತ್ತರಿಸುತ್ತಿದ್ದರೂ ಚಕಾರವೆತ್ತದ ಪ್ರಧಾನಿ ಮೋದಿ ವಿದೇಶ ಪ್ರವಾಸಗಳಲ್ಲಿ ತಲ್ಲೀನರಾಗಿದ್ದಾರೆ. ಜಾತಿ, ಧರ್ಮಗಳ ನಡುವೆ ಕಿತ್ತಾಟವಿಟ್ಟು, ಜನರನ್ನು ದಿಕ್ಕುತಪ್ಪಿಸುತ್ತಿರುವುದು ಅವರಿಗೆ ಶೋಭೆಯಲ್ಲ. ರಾಷ್ಟ್ರದ ವಿಚಾರಕ್ಕಾಗಿ ಎಂದಿಗೂ ಅವರು ವಿದೇಶಕ್ಕೆ ಹೋಗಿಲ್ಲ. ದೇಶದಲ್ಲಿ ಅಘೋಷಿತ ತುರ್ತು ಸಂದರ್ಭವಿದೆ. ಪ್ರಶ್ನಿಸುವವರನ್ನು ಹೆದರಿಸಿ ಗೂಂಡಾಗಿರಿ ರಾಜಕಾರಣ ನಡೆಸುತ್ತಿದ್ದಾರೆಂದು ಟೀಕಿಸಿದರು. ಮಲ್ಲಿಕಾರ್ಜುನ ಖರ್ಗೆ, ರಾಹುಲ್‌ಗಾಂಧಿ, ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವಾರು ನಾಯಕರುಗಳ ಸಲಹೆಯಂತೆ ಪಕ್ಷ ಚುರುಕಾಗಿ ಸಂಘಟನೆಯಲ್ಲಿ ತೊಡಗಿದೆ. ಪಂಚರಾಜ್ಯಗಳಲ್ಲಿ ನಡೆಯುವ ಚುನಾವಣೆಯಲ್ಲಿ ಗೆಲುವು ನಮ್ಮದೆ. ರಾಜ್ಯದಿಂದ ಗೆದ್ದಿರುವ ಬಿಜೆಪಿ. ಎಂ.ಪಿ.ಗಳು ಪ್ರಧಾನಿ ಮುಂದೆ ನಿಂತು ರಾಜ್ಯದ ಅಭಿವೃದ್ಧಿಗೆ ಯಾವ ಬೇಡಿಕೆಯನ್ನು ಇದುವರೆವಿಗೂ ಮಂಡಿಸಿಲ್ಲ. ಮೋದಿ ಎದುರು ನಿಂತು ಕೇಳುವ ಧೈರ್ಯವೂ ಅವರುಗಳಿಗೆ ಇಲ್ಲದಂತಾಗಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಜನಪರವಾದ ವಿರೋಧ ಪಕ್ಷವಿರಬೇಕೆ ವಿನಃ ಜನರಿಗೆ ತಪ್ಪು ಸಂದೇಶ ನೀಡುವಂತಾಗಬಾರದು. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಬದುಕುವುದು ಕಷ್ಟವಾಗಿದೆ. ಮಳೆಯಿಲ್ಲದೆ ರೈತರು ಕೃಷಿಗಾಗಿ ಮಾಡಿದ ಸಾಲವನ್ನು ತೀರಿಸಲು ಆಗುತ್ತಿಲ್ಲ. ಇದ್ಯಾವುದರ ಪರಿವೆ ಇಲ್ಲದ ಪ್ರಧಾನಿ ಮೋದಿರವರು ಉದ್ಯಮಿಗಳು, ಬಂಡವಾಳ ಶಾಹಿಗಳ ಪರವಾಗಿ ನಿಂತಿರುವುದು ದೇಶದ ದೌರ್ಭಾಗ್ಯ ಎಂದು ವ್ಯಂಗ್ಯವಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ. ತಾಜ್‌ಪೀರ್, ಪ್ರಧಾನ ಕಾರ್ಯದರ್ಶಿಗಳಾದ ಸಂಪತ್‌ಕುಮಾರ್, ಡಿ.ಎನ್.ಮೈಲಾರಪ್ಪ, ಮಾಜಿ ಶಾಸಕ ಎ.ವಿ.ಉಮಾಪತಿ, ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಟಿ.ಜಗದೀಶ್, ಕರಿಯಪ್ಪ ಪಾಲವ್ವನಹಳ್ಳಿ, ನ್ಯಾಯವಾದಿ ಗಂಗಾಧರ್, ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕಾರೇಹಳ್ಳಿ ಉಲ್ಲಾಸ್ ಹಾಜರಿದ್ದರು.

## ಮಹಿಳೆ ಆರ್ಥಿಕ ಸಬಲರನ್ನಾಗಿಸಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕರಿಸುತ್ತಿದೆ: ರಮೇಶ್



» **ಹೊಸದುರ್ಗ**

ಮಹಿಳೆಯರನ್ನು ಆರ್ಥಿಕ ಸಬಲರನ್ನಾಗಿಸಲು, ಸಾಮಾಜಿಕವಾಗಿ ಮುಂದೆ ತರಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಇದರ ಸದುಪಯೋಗ ಪಡೆದುಕೊಳ್ಳಿ ಎಂದು ವಲಯ ಮೇಲ್ವಿಚಾರಕ ರಮೇಶ್ ಹೇಳಿದರು.

ಹಾಲುರಾಮೇಶ್ವರ ಯೋಜನಾ ಕಛೇರಿಯ ವ್ಯಾಪ್ತಿಯ ಜೋಡಿ ಶ್ರೀರಂಗಪುರದ ಗೊಲ್ಲರಹಟ್ಟಿಯಲ್ಲಿ ಆಯೋಜಿಸಿದ್ದ 'ಮಹಿಳಾ ಜ್ಞಾನವಿಕಾಸ ಕೇಂದ್ರ'ದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಹಿಳೆಯರು ಆರ್ಥಿಕ, ಸಾಮಾಜಿಕ, ಬೌದ್ಧಿಕವಾಗಿ ಸದೃಢರಾಗಬೇಕು. ಸಮಾಜದಲ್ಲಿ ಮಹಿಳೆಯರನ್ನು ಅಭಿವೃದ್ಧಿ ಪಡಿಸಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಡಿ ವಿರೇಂದ್ರ ಹೆಗ್ಗಡೆ ಹಾಗೂ ಹೇಮಾವತಿ ಅಮ್ಮನವರು ಹಲವು ಕಾರ್ಯಕ್ರಮ ರೂಪಿಸಿ, ಮಹಿಳೆಯರಿಗೆ ಅರಿವು ಮೂಡಿಸಿ, ಕುಟುಂಬ ಬಲಪಡಿಸುವ ಉದ್ದೇಶ ಹೊಂದಿದ್ದಾರೆ. ಈ ಕಾರ್ಯಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ಹೊಳಲ್ಕೆರೆ ತಾಲ್ಲೂಕಿನ ಬಸವೇಶ್ವರ ಪ್ರೌಢಶಾಲೆ ಶಿಕ್ಷಕ ಕೆ. ಎಸ್. ಸೋಮಶೇಖರ್ ಉಪನ್ಯಾಸ ನೀಡಿ, ಆರ್ಥಿಕ ಸ್ವಾವಲಂಬನೆಯಲ್ಲಿ ಮಹಿಳೆಯ ಪಾತ್ರ ಬಹಳ ಮುಖ್ಯವಾಗಿದ್ದು, ಶಿಸ್ತು ಪಾಲನೆ ಆರ್ಥಿಕ ಶಿಸ್ತು ಸಂಸ್ಕೃತಿ ಸಂಸ್ಕಾರ ಇವುಗಳಿಂದ ಸಮಾಜದಲ್ಲಿ ಬದಲಾವಣೆಯಾಗಲು ಸಾಧ್ಯ ಎಂದರು. ಈ ವೇಳೆ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.ಗ್ರಾಮ ಪಂಚಾಯತಿ ಉಪಾಧ್ಯಕ್ಷ ದೇವರಾಜ್, ವಲಯ ಮೇಲ್ವಿಚಾರಕ ರಮೇಶ್, ಗ್ರಾಮ ಪಂಚಾಯತಿ ಸದಸ್ಯ ಈಶ್ವರ್, ಒಕ್ಕೂಟದ ಅಧ್ಯಕ್ಷ ಪುಟ್ಟಪ್ಪ, ಜ್ಞಾನ ವಿಕಾಸ ಕೇಂದ್ರದ ಅಧ್ಯಕ್ಷರಾದ ಕವಿತ, ಸಮನ್ವಯಾಧಿಕಾರಿ ಗಂಗಮ್ಮ, ಸೇವಾ ಪ್ರತಿನಿಧಿ ಪ್ರೇಮಾ ಮುಖಂಡ ರಾಮಪ್ಪ, ಮಹಿಳಾ ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಸೇರಿದಂತೆ ಹಲವರಿದ್ದರು.

## ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ ಉಚಿತ ಎಲ್.ಪಿ.ಜಿಗಾಗಿ ಅರ್ಜಿ ಆಹ್ವಾನ

» **ದಾವಣಗೆರೆ**

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಉಜ್ವಲ ಯೋಜನೆ(3ನೇ ಹಂತ)ಯಡಿ ಬಡ ಕುಟುಂಬಗಳ ಮಹಿಳಾ ಸಬಲೀಕರಣದ ಉದ್ದೇಶದಿಂದ ಉಚಿತ ಎಲ್.ಪಿ.ಜಿ ವಿತರಣೆ ಮಾಡಲಾಗುತ್ತದೆ.

ಉಜ್ವಲ್ ಯೋಜನೆಯಡಿ ಮೂರನೇ ಹಂತದ ಎಲ್.ಪಿ.ಜಿ ಸಂಪರ್ಕ ಪಡೆಯುವ ಗ್ರಾಹಕರಿಗೆ ಎರಡು ಬರ್ನರ್ ಸ್ಟೌವ್, 14.2 ಕೆ.ಜಿ ಸಿಲಿಂಡರ್ ಮತ್ತು ಎರಡು 5 ಕೆ.ಜಿ ಸಿಲಿಂಡರ್, ಒಂದು ರೆಗ್ಯುಲೇಟರ್, ಒಂದು ಸುರಕ್ಷಾ ಹೋಸ್, ಡಿ.ಜಿ.ಸಿ.ಸಿ ಬುಕ್‌ಗಳನ್ನು ಸಂಪೂರ್ಣ ಉಚಿತವಾಗಿ ನೀಡಲಾಗುವುದು. ಇದುವರೆಗೂಎಲ್.ಪಿ.ಜಿಅನಿಲಸಂಪರ್ಕಗಳನ್ನು ಹೊಂದಿರದ ಕುಟುಂಬದ ಮಹಿಳೆಯರು ಅಗತ್ಯ ದಾಖಲೆಗಳೊಂದಿಗೆ ಹತ್ತಿರದ ಎಲ್.ಪಿ.ಜಿ ವಿತರಕ ಕಂಪನಿಗೆ ಭೇಟಿ ನೀಡಿ ಸೌಲಭ್ಯವನ್ನು ಪಡೆಯಬಹುದು ಮತ್ತು ಕ್ಯೂ. ಆರ್.ಕೋಡ್ ಮೂಲಕ ಯೋಜನೆ ಮಾಹಿತಿ ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ; ವೆಂಕಟೇಶ್ ಎಂ.ವಿ. ತಿಳಿಸಿದ್ದಾರೆ.

## ನನ್ನ ಮಣ್ಣು, ನನ್ನ ದೇಶ: ಪಾದಯಾತ್ರೆ

**ದಾವಣಗೆರೆ:** ಜಿಲ್ಲಾ ಪಂಚಾಯತ್ ಜಿಲ್ಲಾ ನೆಹರು ಯುವ ಕೇಂದ್ರ ಹಾಗೂ ಯುವಜನ ಸೇವಾ ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 19 ರಂದು ಬೆಳಿಗ್ಗೆ 11 ಗಂಟೆಗೆ ನನ್ನ ಮಣ್ಣು, ನನ್ನ ದೇಶ ಎಂಬ ಶೀರ್ಷಿಕೆಯಡಿ ಅಮೃತ ಕಳಶ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

**ಪ್ರಮುಖ ಸುದ್ದಿ**

# ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿಗೆ ಚಟುವಟಿಕೆ ಆಧಾರಿತ ಬೋಧನೆ ಅಗತ್ಯ: ಎಸ್.ಬಸವರಾಜು

» **ಹೊಸದುರ್ಗ**

ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ವೃದ್ಧಿಗೆ ಪ್ರಾಯೋಗಿಕ ಚಟುವಟಿಕೆ ಆಧಾರಿತ ಬೋಧನೆ ಅಗತ್ಯ ಎಂದು ಡಯಟ್ ಉಪನ್ಯಾಸಕ ಎಸ್. ಬಸವರಾಜು ಹೇಳಿದರು.

ಪಟ್ಟಣದ ಎಸ್.ವಿ.ಎಸ್ ಬಿ.ಇಡಿ ಕಾಲೇಜಿನಲ್ಲಿ ಚಿತ್ರದುರ್ಗದ ಡಯಟ್‌ನಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಡಯಟ್ ಸಂಸ್ಥೆಯ ಪಾತ್ರ ಕುರಿತು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಶಿಕ್ಷಕರು ಸಂಶೋಧನಾ ಗುಣ ಬೆಳೆಸಿಕೊಂಡು ವಿದ್ಯಾರ್ಥಿಗಳಲ್ಲಿ ಅನ್ವೇಷಣೆ ಸಾಮರ್ಥ್ಯ ಮತ್ತು ವೈಜ್ಞಾನಿಕ ಮನೋಭಾವನೆ ಬೆಳೆಸಬೇಕು ಎಂದು ತಿಳಿಸಿದರು.

ಶಿಕ್ಷಕರ ವೃತ್ತಿಪರ ಸಾಮರ್ಥ್ಯ ಅಭಿವೃದ್ಧಿಗೆ ಡಯಟ್ ವತಿಯಿಂದ ಬುನಾದಿ ತರಬೇತಿ, ನಾಯಕತ್ವ ತರಬೇತಿ, ಎನ್.ಸಿ.ಇ.ಆರ್.ಟಿ ಪಠ್ಯಾಧಾರಿತ ತರಬೇತಿ, ತಂತ್ರಜ್ಞಾನ



ಆಧಾರಿತ ತರಬೇತಿ ನೀಡಲಾಗುತ್ತದೆ.

ಸಹಪಠ್ಯ ಚಟುವಟಿಕೆಗಳಿಂದ ಮಕ್ಕಳಲ್ಲಿ ಆತ್ಮವಿಶ್ವಾಸ, ಕ್ರಿಯಾಶೀಲತೆ ವೃದ್ಧಿಯಾಗುತ್ತದೆ. ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾಗಿ ಅವರಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸಲು ವಿಜ್ಞಾನ ವಿಚಾರ ಸಂಕಿರಣ, ನಾಟಕ, ಪ್ರಬಂಧ, ಪಾತ್ರಾಭಿನಯ, ಜನಪದ ನೃತ್ಯ ಸ್ಪರ್ಧೆಗಳನ್ನು ನಡೆಸಲಾಗುತ್ತದೆ ಎಂದರು.

ಉಪನ್ಯಾಸಕಕೆ.ಜಿ.ಪ್ರಶಾಂತ್ ಮಾತನಾಡಿ ಡಯಟ್‌ನಲ್ಲಿ ಜಿಲ್ಲಾ ಸಂಪನ್ಮೂಲ ಘಟಕ, ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಣ, ಯೋಜನೆ ಮತ್ತು ನಿರ್ವಹಣೆ, ಶೈಕ್ಷಣಿಕ ತಂತ್ರಜ್ಞಾನ, ಪಠ್ಯಕ್ರಮ ಮತ್ತು ಮೌಲ್ಯಮಾಪನ, ಕಾರ್ಯಾನುಭವ ಒಳಗೊಂಡ 7 ವಿಭಾಗಗಳ ಮೂಲಕ ಶೈಕ್ಷಣಿಕ ಚಟುವಟಿಕೆ ನಿರ್ವಹಿಸಲಾಗುತ್ತದೆ. ಎನ್.ಎಂ.ಎಂ.ಎಸ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗಲು ಪ್ರೌಢಶಾಲಾ ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗೆ ಜಿ-ಮ್ಯಾಟ್ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಉಪನ್ಯಾಸಕ ಯು.ಸಿದ್ದೇಶಿ ಮಾತನಾಡಿ, ಮಕ್ಕಳಲ್ಲಿ ಕುತೂಹಲ, ಆಲೋಚನಾ ಶಕ್ತಿ ಹೆಚ್ಚಿರುತ್ತದೆ. ಅವರಲ್ಲಿ ಮೂಡುವ ಪ್ರಶ್ನೆಗಳಿಗೆ ಉತ್ತರಿಸಲು ಪ್ರಶಿಕ್ಷಣಾರ್ಥಿಗಳು ಪೂರ್ವ ಸಿದ್ಧತೆಯಿಂದ ತರಗತಿ ನಿರ್ವಹಣೆ ಮಾಡಬೇಕು. ಬೋಧನಾ ಕೌಶಲಗಳಲ್ಲಿ ಸಾಮರ್ಥ್ಯ ಪಡೆಯುವುದರ ಜತೆಗೆ ಪಠ್ಯ ವಿಷಯವನ್ನು ಆಸಕ್ತಿದಾಯಕವಾಗಿ ಬೋಧಿಸಬೇಕು ಎಂದರು. ಉಪನ್ಯಾಸಕರಾದ ಗಿರೀಶ್, ಶಿವಕುಮಾರ್ ಮತ್ತು ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು.

## ಫಾಸ್ಟ್ ನ್ಯೂಸ್

### ವಿದ್ಯಾರ್ಥಿ ವೇತನ: ವಿಕಲಚೇತನ ವಿದ್ಯಾರ್ಥಿಗಳಿಂದ ಅರ್ಜಿ

» **ಚಿತ್ರದುರ್ಗ**

2023-24ನೇ ಸಾಲಿಗೆ ರಾಷ್ಟ್ರೀಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ (ಎನ್.ಎಸ್.ಪಿ ಪೋರ್ಟಲ್) ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ತಾವುಗಳು ವ್ಯಾಸಂಗ ಮಾಡುತ್ತಿರುವ ಶಾಲಾ ಕಾಲೇಜುಗಳು, ಶಿಕ್ಷಣ ಸಂಸ್ಥೆಗಳ ಮುಖಾಂತರ ಮೆಟ್ರಿಕ್ ಪೂರ್ವ ವಿಧ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ನವೆಂಬರ್ 30 ಕೊನೆಯ ದಿನ. ಮೆಟ್ರಿಕ್ ನಂತರದ ವಿಧ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಡಿಸೆಂಬರ್ 31 ಕೊನೆಯ ದಿನ. Website: www.scholarships.gov.inನ ಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಹ ವಿಕಲಚೇತನ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ ಅರ್ಜಿಯ ಒಂದು ಪ್ರತಿಯನ್ನು ಆಯಾ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು ಅಥವಾ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಸಲ್ಲಿಸಿ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಮಾಹಿತಿಗಾಗಿ ತಾಲ್ಲೂಕು ಪಂಚಾಯ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಚಿತ್ರದುರ್ಗ ದೂರವಾಣಿ ಸಂಖ್ಯೆ 08194-235284 ಕ್ಕೆ ಸಂಪರ್ಕಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ ತಿಳಿಸಿದ್ದಾರೆ.

### ಲೋಕಾಯುಕ್ತ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

» **ಚಿತ್ರದುರ್ಗ**

ಅಕ್ಟೋಬರ್ 19 ರಿಂದ 21ರವರೆಗೆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತಾಲ್ಲೂಕುಗಳಿಗೆ ಖುದ್ದಾಗಿ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ, ಸಾರ್ವಜನಿಕರಿಂದ ದೂರು ಹಾಗೂ ಅವಹಾಲುಗಳನ್ನು ಸ್ವೀಕರಿಸಲಿದ್ದಾರೆ. ಅಕ್ಟೋಬರ್ 19ರಂದು ಚಳ್ಳಕೆರೆ ಮತ್ತು ಹೊಳಲ್ಕೆರೆ ತಾಲ್ಲೂಕು ಕಚೇರಿಗಳಲ್ಲಿ, ಅಕ್ಟೋಬರ್ 20ರಂದು ಮೊಳಕಾಲ್ಮೂರು ಮತ್ತು ಹಿರಿಯೂರು ತಾಲ್ಲೂಕು ಕಚೇರಿಗಳಲ್ಲಿ, ಅಕ್ಟೋಬರ್ 21ರಂದು ಹೊಸದುರ್ಗ ತಾಲ್ಲೂಕು ಕಚೇರಿಯಲ್ಲಿ, ಪ್ರತಿದಿನ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ವರೆಗೆ ಲೋಕಾಯುಕ್ತ ಅಧಿಕಾರಿಗಳು ಹಾಜರಿದ್ದು, ದೂರು, ಅಹವಾಲು ಸ್ವೀಕರಿಸುವರು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎನ್.ವಾಸುದೇವರಾಮ ತಿಳಿಸಿದ್ದಾರೆ.

### ತೋಟಗಾರಿಕೆ ಬೆಳೆಗಳಿಗೆ ಸಹಾಯಧನ: ಅರ್ಜಿ ಆಹ್ವಾನ

» **ಚಿತ್ರದುರ್ಗ**

2023-24ನೆ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳಿಗಳಿಗೆ (ಅಡಿಕೆ ಬೆಳೆ ಹೊರತುಪಡಿಸಿ) ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವ ಸಾಮಾನ್ಯ ವರ್ಗ ರೈತರಿಗೆ ಶೇ.75%, ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ.90% ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿಗಳಾದ ಎನ್.ಎಂ.ಮೇಘನ (ಕಸಬಾ-1) 8296763058, ಎಸ್.ಎಂ.ಹರೀಶ (ಕಸಬಾ-2) 7065079256, ಎಂ.ಆರ್.ಪೂಜಾ (ಭರಮಸಾಗರ) 8105891565, ಹೆಚ್.ತಿಪ್ಪೇಸ್ವಾಮಿ (ಹಿರೇಗುಂಟನೂರು) 9902227011, ಜೀತೇಂದ್ರ ಚೌವ್ಹಣ್ (ತುರುವನೂರು) 6362645646 ಗೆ ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಟಿ.ಆರ್.ಶಶಿಕಲ ತಿಳಿಸಿದ್ದಾರೆ.

### ಪಡಿತರ ಧಾನ್ಯ ಹಂಚಿಕೆ

» **ದಾವಣಗೆರೆ**

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯಲ್ಲಿನ ಪಡಿತರ ಚೀಟಿದಾರರಿಗೆ ಅಕ್ಟೋಬರ್ ಮಾಹೆಗೆ ಅನ್ವಯವಾಗುವಂತೆ ಪಡಿತರ ಆಹಾರ ಧಾನ್ಯವನ್ನು ಹಂಚಿಕೆ ಮಾಡಲಾಗಿದೆ. ಅಂತ್ಯೋದಯ ಪಡಿತರ ಚೀಟಿದಾರರಿಗೆ ಕಾರ್ಡ್‌ಗೆ 21 ಕೆ.ಜಿ ಅಕ್ಕಿ ಮತ್ತು 14 ರಾಗಿ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 3 ಕೆ.ಜಿ ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2ಕೆ.ಜಿ ರಾಗಿ ಉಚಿತವಾಗಿ ವಿತರಿಸಲಾಗುತ್ತದೆ. ಹಾಗೂ ಪ್ರತಿ ಕೆ.ಜಿ ಗೆ ರೂ.15ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ, ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು. ಸರ್ಕಾರದ ಗ್ಯಾರಂಟಿ ಯೋಜನೆಯಡಿ 5 ಕೆ.ಜಿ ಅಕ್ಕಿ ಬದಲಾಗಿ ಪಡಿತರ ಚೀಟಿದಾರರಿಗೆ ನೇರ ನಗದು ವರ್ಗಾವಣೆ ಮಾಡುತ್ತಿದ್ದು, ಯಾವುದೇ ರೀತಿಯ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪರಿಹರಿಸಿಕೊಳ್ಳಬಹುದು.

**ಬೋರೇದೇವರ ಗುಡಿಗೆ 13 ಎಕರೆ ಜಾಗ ಮೀಸಲು: ಮೊಳಕಾಲ್ಮೂರು ಶಾಸಕ**

# ಚಿಕ್ಕ ಉಳ್ಳಾರ್ತಿ ಗ್ರಾಮದಲ್ಲಿ ಕೆಐಡಿಬಿಯಿಂದ ಎಲ್‌ಇಡಿ ವಸ್ತು ತಯಾರಕ ಕೈಗಾರಿಕಾ ಕೇಂದ್ರ: ಗೋಪಾಲಕೃಷ್ಣ

» **ಚಳ್ಳಕೆರೆ**

ತಾಲ್ಲೂಕಿನ ಚಿಕ್ಕ ಉಳ್ಳಾರ್ತಿ ಗ್ರಾಮದ ಬೋಸೇದೇವರ ದೇವಸ್ಥಾನ ಸುತ್ತಮುತ್ತ ಇರುವ 96 ಎಕರೆ ಜಾಗದಲ್ಲಿ ಕೆಐಡಿಬಿಯಿಂದ ಬೃಹತ್ ಕಂಪನಿ ಪ್ರಾರಂಭವಾಗಲಿದೆ ಎಂದು ಮೊಳಕಾಲ್ಮೂರು ಕ್ಷೇತ್ರದ ಶಾಸಕ ಎನ್.ವೈ.ಗೋಪಾಲಕೃಷ್ಣ ತಿಳಿಸಿದರು.



ಅವರು, ನಗರದ ಪ್ರವಾಸಿ ಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಂಪನಿ ಪ್ರಾರಂಭದಿಂದ ಧಾರ್ಮಿಕ ಕಾರ್ಯಕ್ರಮಗಳಿಗೆ ಯಾವುದೇ ಧಕ್ಕೆ ಉಂಟಾಗದಂತೆ ಮುಂಜಾಗ್ರತೆ ವಹಿಸಿ ದೇವರ ಕಾರ್ಯಕ್ಕಾಗಿ ಸುಮಾರು 13 ಎಕರೆ ಜಾಗವನ್ನು ಮೀಸಲಿಡಲಾಗಿದೆ. ಈ ಮೂಲಕ ಬುಡಕಟ್ಟು ಆಚರಣೆಯನ್ನು ಉಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಿದ್ದಾರೆ. ಇಲ್ಲಿ ಪ್ರಾರಂಭವಾಗುತ್ತಿರುವ ಎ□□□ಡಿ ಕ್ಲಸ್ಟರ್ ತಯಾರಿಕ ಕೈಗಾರಿಕಾ ಘಟಕದಿಂದ ನೂರಾರು ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ದೊರೆಯಲಿದೆ. ಗ್ರಾಮದ ರಿ.ಸರ್ವೆ ನಂ ಒಂದರಲ್ಲಿ ಸುಮಾರು 95.65 ಎಕರೆ ಜಮೀನಿನಲ್ಲಿ ಸುಮಾರು 75 ಎಕರೆ ಜಾಗದಲ್ಲಿ ಕೈಗಾರಿಕಾ ಕೇಂದ್ರ ಸ್ಥಾಪನೆ ಮಾಡಲು ಯೋಜನೆ ಸಿದ್ದವಾಗಿದೆ. ಕಂಪನಿ ಪ್ರಾರಂಭದ ಮೂಲಕ ಸ್ಥಳೀಯರಿಗೂ ಉದ್ಯೋಗದ ಜತೆಯಲ್ಲಿ ವ್ಯವಸ್ಥಿತವಾದ , ಕುಡಿಯುವ ನೀರು, ಪರಿಸರ ಸಂರಕ್ಷಣೆ, ರಸ್ತೆಯೂ ಸೇರಿದಂತೆ ಹಲವಾರು ಸಾಮಾಜಿಕ ಕಾರ್ಯಗಳನ್ನು ನಡೆಯಲಿವೆ ಎಂದು ಸಭೆಯಲ್ಲಿ ಕಂಪನಿಯ ನಿರ್ದೇಶಕ ಟಿ.ಎಸ್.ಲಕ್ಷ್ಮೀಶ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಈ ಭಾಗದ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ, ಕಾಡುಗೊಲ್ಲರೂ ಸೇರಿದಂತೆ ಸುಮಾರು 30ಗ್ರಾಮದ ಭಕ್ತರು ಈ ಬೋರೇದೇವರ ಆರಾಧಕರಿದ್ದಾರೆ. ಯಾವುದೇ ಸಮುದಾಯಕ್ಕೂ ನೋವುಂಟದಂತೆ ಸರ್ಕಾರ ಕೈಗಾರಿಕೆ ಕೇಂದ್ರ ಸ್ಥಾಪನೆ ಮಾಡಲು ಅವಕಾಶ ಮಾಡಿಕೊಟ್ಟಿದೆ. ಅದಲ್ಲಿ ಧಾರ್ಮಿಕ ಆಚರಣೆಗೆ ಯಾವುದೇ ಧಕ್ಕೆ ಉಂಟಾಗಬಾರದು ಎಂಬ ಉದ್ದೇಶದಿಂದ ಅಧಿಕಾರಿಗಳು ದೇವಸ್ಥಾನಕ್ಕೆ 13 ಎಕರೆ ಜಾಗವನ್ನು ಮೀಸಲಿಸಿ ಧಾರ್ಮಿಕ ಆಚರಣೆಗಳಿಗೆ ತೊಂದರೆಯಾಗಬಾರದು ಎಂದು ಮುನ್ನೆಚ್ಚರಿಕೆ ವಹಿಸಿದ್ದಾರೆ. ಇಡೀ ಭೂಪಟದಲ್ಲಿ ದೊಡ್ಡ ಉಳ್ಳಾರ್ತಿ ಪ್ರತಿಷ್ಠಿತ ಸಂಶೋಧನಾ ಕೇಂದ್ರಗಳ ಸ್ಥಾಪನೆ ಮೂಲಕ ಹೆಸರು ಪಡೆದಿದೆ. ಅದರಲ್ಲಿ ಈ ಕಂಪನಿಯೂ ಸ್ಥಾಪನೆಯಾದರೆ ಉತ್ತಮ ಕಾರ್ಯವಾಗಲಿದೆ ಎಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಸಿ.ಟಿ.ಶ್ರೀನಿವಾಸ್, ಸದ್ಯದ ಸ್ಥಿತಿಯಲ್ಲಿ 13 ಎಕರೆ ಪ್ರದೇಶವನ್ನು ಮೀಸಲಿಡುವ ಮೂಲಕ ದೇವರ ಕಾರ್ಯಕ್ಕೆ ಅನುವು ಮಾಡಿಕೊಡಲಾಗಿದೆ. ಪುನಃ ಮತ್ತೆ ಅಧಿಕಾರಿಗಳು ಭಕ್ತರಿಗೆಯಾವುದೇ ತೊಂದರೆ ನೀಡದಂತೆ ಶಾಸಕರು ಸೂಚನೆ ನೀಡಬೇಕೆಂದು ಮನವಿ ಮಾಡಿದರು. ಇದಕ್ಕೆ ಸಮ್ಮತಿಸಿದ ಅಧಿಕಾರಿಗಳು ಈಗಾಗಲೇ ಈ ಜಾಗವನ್ನು ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಟ್ಟಿದ್ದು, ಇದನ್ನು ಮತ್ತೆ ಮರಳಿ ವಾಪಾಸ್ ಪಡೆಯುವ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿಲ್ಲ ಎಂದರು. ಗ್ರಾಮದ ಮುಖಂಡರಾದ ದೊಡ್ಡ ಉಳ್ಳಾರ್ತಿ ಕರಿಯಣ್ಣ, ವಕೀಲ ಜಿ.ಆರ್.ಅಶ್ವತ್ಥನಾಯಕ, ದೊರೆ ಬೈಯಣ್ಣ, ದೊರೆಅಪ್ಪಣ್ಣ, ರಾಜು, ಓಬಣ್ಣ, ಪಾಪಣ್ಣ ಮುಂತಾದವರು ಉಪಸ್ಥಿತರಿದ್ದರು.

## ವೀರರಾಣಿ ಕಿತ್ತೂರುರಾಣಿ ಚನ್ನಮ್ಮ ಜಯಂತೋತ್ಸವ ಅ.23ರಂದು: ಶಾಸಕ ಟಿ.ರಘುಮೂರ್ತಿ ಅಧ್ಯಕ್ಷತೆ

» **ಚಳ್ಳಕೆರೆ**

ಪ್ರತಿವರ್ಷದಂತೆ ಈ ವರ್ಷವೂ ವೀರರಾಣಿ ಕಿತ್ತೂರು ರಾಣಿ ಚನ್ನಮ್ಮ ಜಯಂತೋತ್ಸವ ಕಾರ್ಯಕ್ರಮವನ್ನು ಅ.23ರ ಸೋಮವಾರ ಹಮ್ಮಿಕೊಳ್ಳುವಬಗ್ಗೆ ತಹಶೀಲ್ದಾರ್ ರೇಹಾನ್ ಪಾಷ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.




ಸಭೆಯನ್ನು ಉದ್ದೇಶಿಸಿ ಮಾತನಾಡಿದ ತಹಶೀಲ್ದಾರ ರೇಹಾನ್ ಪಾಷ, ರಾಜ್ಯ ಸರ್ಕಾರದ ಸೂಚನೆ ಮೇರೆಗೆ ಕಿತ್ತೂರು ರಾಣಿ ಚನ್ನಮ್ಮ ಜಯಂತೋತ್ಸವವನ್ನು ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಜಯಂತಿ ಕಾರ್ಯಕ್ರಮಕ್ಕೆ ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಹಾಜರಿರುವಂತೆ ಸೂಚನೆ ನೀಡಲಾಗಿದೆ.

ತಾಲ್ಲೂಕಿನಲ್ಲಿ ಕಿತ್ತೂರು ರಾಣಿಚನ್ನಮ್ಮ ಜಯಂತಿ ಆಚರಣೆ ಬಗ್ಗೆ ಸಮುದಾಯದ ಮುಖಂಡರೂ ಸಹ ಹೆಚ್ಚು ಉತ್ಸಾಹದಿಂದ ಇದ್ದು ಅವರೂ ಸಹ ತಾಲ್ಲೂಕು ಆಡಳಿತಕ್ಕೆ ಸಹಕಾರ ನೀಡಬೇಕು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಟಿ.ರಘುಮೂರ್ತಿ ವಹಿಸುವರು ಎಂದರು. ಪೂರ್ವಭಾವಿ ಸಭೆಯಲ್ಲಿ ಬಿ.ನಾಗೇಂದ್ರಪ್ಪ, ಎಸ್. ರುದ್ರಪ್ಪ, ಕೆ.ಟಿ.ಶಿವಕುಮಾರ್, ಪ್ರಸನ್ನಕುಮಾರ್, ಕೆ.ಪಿ.ಲೋಕೇಶ್, ಎಂ.ಪ್ರಕಾಶ್, ಕೆ.ಎಂ. ಜಗದೀಶ್, ಎಂ.ಮಂಜುಳಾ, ಪ್ರಮೋದ, ಮಂಜಮ್ಮ ಮುಂತಾದವರು ಭಾಗವಹಿಸಿದ್ದರು.

## ಗೌರಸಮುದ್ರ ಶ್ರೀಮಾರಮ್ಮ ದೇವಿ ಹುಂಡಿಹಣ ಏಣಿಕೆ: 4,95,580 ಹಣ ಸಂಗ್ರಹ



» **ಚಳ್ಳಕೆರೆ**

ತಾಲ್ಲೂಕಿನ ತಳಕು ಹೋಬಳಿಯ ಗೌರಸಮುದ್ರ ಶ್ರೀಮಾರಮ್ಮ ದೇವಿ ಜಾತ್ರೆಯ ಮರಿಪರಿಷೆ ಅ.17ರ ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಯಶಸ್ವಿಯಾಗಿ ನಡೆದಿದ್ದು, ಜಿಲ್ಲೆಯೂ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿದ್ದು, ಮರಿಪರಿಷೆ ಕಾರ್ಯದಲ್ಲಿ ಭಾಗವಹಿಸಿ ದೇವಿಯ ಆಶೀರ್ವಾದ ಪಡೆದಿರುತ್ತಾರೆ.

ಮರಿಪರಿಷೆಸಂದರ್ಭದಲ್ಲಿಬೆಳಗಿನಿಂದಸಂಜೆತನಕದೇವಸ್ಥಾನಕ್ಕೆಭಕ್ತರ ದಂಡೆ ಹರಿದು ಬಂದಿದ್ದು, ತಮ್ಮ ಹರಿಕೆಗಳನ್ನು ಬಿನ್ನೈಸುವುದರೊಂದಿಗೆ ಉದಾರವಾಗಿ ಭಕ್ತಿಯಿಂದ ದೇವರಿಗೆ ಕಾಣಿಕೆಯನ್ನು ಸಹ ಸಲ್ಲಿಸಿದ್ದಾರೆ. ಮುಜರಾಯಿ, ಕಂದಾಯ, ಪೊಲೀಸ್ ಹಾಗೂ ಗ್ರಾಮ ಪಂಚಾಯಿತಿ ಇಲಾಖೆಗಳ ಸಹಯೋಗದೊಂದಿಗೆ ಬ್ಯಾಂಕ್‌ನ ಅಧಿಕಾರಿಗಳು ಸಹ ಹುಂಡಿಯ ಹಣವನ್ನು ಏಣಿಕೆ ಮಾಡಿದ್ದು, ಮರಿಪರಿಷೆ 4,95,580ರೂ ಕಾಣಿಕೆ ಸಲ್ಲಿಕೆಯಾಗಿತ್ತು. ತಹಶೀಲ್ದಾರ್ ರೇಹಾನ್ ಪಾಷ, ವೃತ್ತ ನಿರೀಕ್ಷಕ ಕೆ.ಸಮೀವುಲ್ಲಾ ಮಾರ್ಗದರ್ಶನದಲ್ಲಿ ಸುಮಾರು ಮೂರು ಗಂಟೆಗಳ ಕಾಲ ಏಣಿಕೆ ಕಾರ್ಯ ಸುಗಮವಾಗಿ ನಡೆಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಓಬಣ್ಣ, ಸದಸ್ಯರಾದ ಶಶಿಕುಮಾರ್, ಮಲ್ಲಯ್ಯ, ತಿಮ್ಮಾರೆಡ್ಡಿ, ಸಂಜಯ್‌ಗೌಡ, ಗುರುಸ್ವಾಮಿ, ಜಯಮ್ಮ, ತುಳಸಿ, ಸುಭಾಷಿಣಿ, ಅರ್ಚಕ ಪಿ.ಆರ್.ನಿಂಗಣ್ಣ, ರುದ್ರಣ್ಣ, ಪಿಡಿಓ ಹನುಮಂತರಾಜು, ಕಂದಾಯಾಧಿಕಾರಿ ತಿಪ್ಪೇಸ್ವಾಮಿ, ಲಿಂಗೇಗೌಡ, ಗ್ರಾಮ ಲೆಕ್ಕಾಧಿಕಾರಿ ನರೇಂದ್ರಬಾಬು ಮುಂತಾದವರು ಪಾಲ್ಗೊಂಡಿದ್ದರು.



ಶ್ರೀಸೋಮೇಶ್ವರ ವಿದ್ಯಾಲಯ ದಾವಣಗೆರೆ ಹಾಗೂ ಗೋಣಿವಾಡದ ಶಿಕ್ಷಕ ಸಿಬ್ಬಂದಿ ದಸರಾ ಹಿನ್ನೆಲೆ ನೀರಿ ಸೀರೆಯುಟ್ಟು ಕಂಗೊಳಿಸಿದರು.

### ವಿದ್ಯುತ್ ವ್ಯತ್ಯಯ

**ದಾವಣಗೆರೆ:** 66/11 ಕೆ.ವಿ. ದಾವಣಗೆರೆ ವಿದ್ಯುತ್ ವಿತರಣಾ ಕೇಂದ್ರದ ಫೀಡರ್‌ನಿಂದ 24*7 ಜಲಸಿರಿ ಯೋಜನೆಯಡಿ ನಿರಂತರ ಶುದ್ಧಕುಡಿಯುವ ಯೋಜನೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅಕ್ಟೋಬರ್ 19 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಎಂ.ಸಿ.ಸಿ.ಬಿ ಎಫ್.2 ಫೀಡರ್ ವ್ಯಾಪ್ತಿಯ ಎಸ್.ಎಸ್ ಲೇಔಟ್ ಎ.ಬ್ಲಾಕ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

**ಪ್ರಮುಖ ಸುದ್ದಿ**

# ಕೆರೆಯಾಗಳಹಳ್ಳಿಯಲ್ಲಿ ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ

» **ಹೊಳಲ್ಕೆರೆ**

ರಾಜಕಾರಣದಲ್ಲಿ ಅಧಿಕಾರ ಸಿಕ್ಕಾಗ ಹತ್ತಾರು ಜನ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿ ಸಮಾಜದ ಋಣ ತೀರಿಸಬೇಕು ಎಂದು ಹೊಳಲ್ಕೆರೆ ಶಾಸಕ ಡಾ.ಎಂ. ಚಂದ್ರಪ್ಪ ಹೇಳಿದರು.



ಉಪ್ಪರಿಗೇನಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜು ಎನ್.ಎಸ್.ಎಸ್.ಘಟಕದಿಂದ ತಾಲ್ಲೂಕಿನ ಕೆರೆಯಾಗಳಹಳ್ಳಿಯಲ್ಲಿ ಬುಧವಾರ ನಡೆದ 2023-24 ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಎಂಟು ದಿನಗಳ ಕಾಲ ಎನ್.ಎಸ್.ಎಸ್.ಘಟಕದ ವತಿಯಿಂದ ಸ್ವಚ್ಚತೆ, ಆರೋಗ್ಯದ ಕುರಿತು ವಿವಿಧ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೇವಲ 90 ಲಕ್ಷ ಜನಸಂಖ್ಯೆಯಿರುವ ಇಸ್ರೇಲ್ ಗಾಜಾಪಟ್ಟಿ ಮೇಲೆ ಯುದ್ದವನ್ನು ಸಮರ್ಥವಾಗಿ ಎದುರಿಸುತ್ತಿದೆ. ಅಲ್ಲಿ ಹುಟ್ಟಿದ ಹೆಣ್ಣಿರಲಿ, ಗಂಡಿರಲಿ ಶಿಕ್ಷಣದ ನಂತರ ಕಡ್ಡಾಯವಾಗಿ ಸೇನೆಯಲ್ಲಿ ಸೇವೆ ಸಲ್ಲಿಸಬೇಕೆಂಬ ಪದ್ದತಿಯಿದೆ. ಇದರಿಂದ ಅವರಲ್ಲಿ ಎಂತಹ ದೇಶಾಭಿಮಾನವಿದೆ ಎನ್ನುವುದು ಗೊತ್ತಾಗುತ್ತದೆ ಎಂದರು.

ಮನುಷ್ಯನಾಗಿ ಹುಟ್ಟಿದ ಮೇಲೆ ಸಾರ್ವಜನಿಕ ಹಿತ ಕಾಯುವುದರ ಜೊತೆಗೆ ಬಡವರ ಕಷ್ಠ-ಸುಖಗಳಿಗೆ ಸ್ಪಂದಿಸಬೇಕು. ತಾಲ್ಲೂಕಿನಾದ್ಯಂತ ಎಲ್ಲಾ ಕೆರೆಗಳನ್ನು ಅಭಿವೃದ್ಧಿಪಡಿಸಿ ಚೆಕ್‌ಡ್ಯಾಂಗಳನ್ನು ಕಟ್ಟಿಸಿರುವುದರಿಂದ ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟ ಜಾಸ್ತಿಯಾಗಿದೆ. ನೀರು ಮಳೆಯಿಲ್ಲದ ರಾಷ್ಟ್ರ ಇಸ್ರೇಲ್ ಎತ್ತರಕ್ಕೆ ಬೆಳೆದಿದೆ ಎನ್ನುವುದಾದರೆ ಅಲ್ಲಿನ ಪ್ರಜೆಗಳಲ್ಲಿರುವ ಸಮಯ ಹಾಗೂ ಕಾಯಕ ಪ್ರಜ್ಞೆ ಕಾರಣ ಎಂದು ತಿಳಿಸಿದರು.

ವಿದ್ಯುತ್ ಸಮಸ್ಯೆಯಾಗಬಾರದೆಂದು ಕೆರೆಯಾಗಳಹಳ್ಳಿ ಪಕ್ಕ ತೇಕಲವಟ್ಟಿ ಗುಡ್ಡದಲ್ಲಿ ಇಪ್ಪತ್ತು ಕೋಟಿ ರೂ. ವೆಚ್ಚದಲ್ಲಿ ಪವರ್ ಸ್ಟೇಷನ್ ಕಟ್ಟಿಸಿದ್ದೇನೆ. ಚಿಕ್ಕಜಾಜೂರಿನ ಕೋಟಹಾಳ್ ಸಮೀಪ ಜೋಗ್‌ಪಾಲ್ಸ್‌ನಿಂದ ನೇರವಾಗಿ ವಿದ್ಯುತ್ ಪೂರೈಸಿಕೊಳ್ಳುವುದಕ್ಕಾಗಿ 250 ಕೋಟಿ ರೂ. ವೆಚ್ಚದಲ್ಲಿ ಪವರ್ ಸ್ಟೇಷನ್ ಕೆಲಸ ಆರಂಭವಾಗಿದೆ. ಸರ್ಕಾರ ಯಾವುದಾದರೂ ಅಧಿಕಾರದಲ್ಲಿರಲಿ ಅದರ ಬಗ್ಗೆ ಚಿಂತಿಸುವುದಿಲ್ಲ. ಸಾವಿರಾರು ಕೋಟಿ ರೂ.ಗಳ ಅನುದಾನ ತಂದು ಕೆಲಸ ಮಾಡುವ ಸಾಮರ್ಥ್ಯವಿಟ್ಟುಕೊಂಡಿದ್ದೇನೆ. ಶಿಕ್ಷಣದ ಜೊತೆ ಪರೋಪಕಾರದ ಗುಣ ಬೆಳೆಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಶಾಸಕ ಡಾ.ಎಂ.ಚಂದ್ರಪ್ಪ ಕರೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಯಶೋಧಮ್ಮ ತಿಮ್ಮಾಭೋವಿ, ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಟಿ.ಚಂದ್ರಪ್ಪ, ಕೆ.ದ್ಯಾಮಣ್ಣ, ಮೂರ್ತಣ್ಣ, ಕೆ.ಆರ್.ಸುರೇಶ್, ಪ್ರಸನ್ನಕುಮಾರ್, ಹೊನ್ನಪ್ಪ, ಟಿ.ಮಹೇಶ್ವರಪ್ಪ, ಆರ್.ಉಮೇಶ್, ಆರ್.ವಿಜಯ್, ಮಂಜುನಾಥ್, ಆರ್. ರಂಗಸ್ವಾಮಿ, ದಿನೇಶ್, ಕೆ.ಆರ್. ವೆಂಕಟರಾಮಪ್ಪ ಉಪಸ್ಥಿತರಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T